೧. ಹೆಸರು : ಡಾ.ಕೆ.ರವೀಂದ್ರನಾಥ

೨. ಜನ್ಮ ದಿನಾಂಕ : ೨೨.೦೭.೧೯೬೨

೩. ವಿದ್ಯಾರ್ಹತೆ : ಎಂ.ಎ., ಪಿಎಚ್.ಡಿ

೪. ವಿಳಾಸ : ಸಹ ಪ್ರಧ್ಯಾಪಕರು, ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ ೫೮೩ ೨೭೬

೫. ಸ್ಥಿರ ದೂರವಾಣಿ ಸಂಖ್ಯೆ : ೨೨೨೧೯೬ (೦೮೩೯೪)

೬. ಮೊಬೈಲ್ ಸಂಖ್ಯೆ : ೯೪೪೮೨೭೧೯೪೬

೭. ಕಾರ್ಯನಿರ್ವಹಿಸುತ್ತಿರುವ ವಿಭಾಗ : ಹಸ್ತಪ್ರತಿಶಾಸ್ತ್ರ ವಿಭಾಗ

೮. ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಹುದ್ದೆ : ಸಹಪ್ರಾಧ್ಯಾಪಕರು

೯. ವಿಷಯ ತಜ್ಞತೆ
೧. ಕನ್ನಡ ಸಾಹಿತ್ಯ
೨. ಹಸ್ತಪ್ರತಿಶಾಸ್ತ್ರ

೧೦. ಅಧ್ಯಯನ ನಡೆಸುತ್ತಿರುವ ಆಸಕ್ತಿಯ ಕ್ಷೇತ್ರಗಳು
೧. ಹಳಗನ್ನಡ ೪. ಗ್ರಂಥಸಂಪಾದನೆ
೨. ನಡುಗನ್ನಡ ೫. ಶಾಸನಶಾಸ್ತ್ರ
೩. ಹಸ್ತಪ್ರತಿಶಾಸ್ತ್ರ ೬. ಲಿಂಗಾಯತ ಸಂಸ್ಕೃತಿ

೧೧. ಯೋಜನೆಗಳ ವಿವರ

**ಪೂರ್ಣಗೊಳಿಸಿದ ಸಾಂಸ್ಥಿಕ ಯೋಜನೆಗಳು**

**೧. ಹಸ್ತಪ್ರತಿ ಸರ್ವೇಕ್ಷಣೆ-ಸಂಗ್ರಹ ಸೂಚಿರಚನೆ**

ಈ ಯೋಜನೆಯಲ್ಲಿ ಬಳ್ಳಾರಿ ಕೊಪ್ಪಳ ರಾಯಚೂರು ಚಿತ್ರದುರ್ಗ ಹಾಗೂ ಧಾರವಾಡ ಜಿಲ್ಲೆಗಳ ತಾಲೂಕುವಾರು ಆಯ್ದ ಗ್ರಾಮಗಳಲ್ಲಿ ಕ್ಷೇತ್ರಕಾರ್ಯ ಕೈಗೊಂಡು ಹಸ್ತಪ್ರತಿ ಸರ್ವೇಕ್ಷಣೆ ಮಾಡಲಾಯಿತು. ಈ ಭಾಗದ ಮನೆ ಮಠಗಳಲ್ಲಿ ದೊರೆತ ಹಸ್ತಪ್ರತಿಗಳನ್ನು ಸಂಗ್ರಹಿಸಲಾಯಿತು. ಇದು ಹಸ್ತಪ್ರತಿಶಾಸ್ತ್ರ ವಿಭಾಗದ ನಿರಂತರ ಯೋಜನೆ. ಇದುವರೆಗೆ ಮೇಲಿನ ೫ ಜಿಲ್ಲೆಗಳಲ್ಲಿಯ ಹಸ್ತಪ್ರತಿಗಳನ್ನು ದುರಸ್ತಿಗೊಳಿಸಿ ಭಂಡಾರದಲ್ಲಿ ಸಂರಕ್ಷಿಸಿ ಇಡಲಾಯಿತು. ಸಂರಕ್ಷಿಸಿದ ಹಸ್ತಪ್ರತಿಗಳನ್ನು ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಸೂಚಿ ಸಂಪುಟಗಳ ಹೆಸರಿನಲ್ಲಿ ಸೂಚಿ ರಚನೆ ಮಾಡಲಾಗಿದೆ. ಇದುವರೆಗೆ ಈ ಯೋಜನೆಯಡಿ ೪೦೦ ಹಸ್ತಪ್ರತಿ ಕಟ್ಟುಗಳಂತೆ ೨ ಸಂಪುಟಗಳಲ್ಲಿ ಸೂಚಿಯನ್ನು ಸಿದ್ಧಗೊಳಿಸಲಾಗಿದೆ. ಒಟ್ಟು ಒಂದು ಅಂದಾಜಿನ ಪ್ರಕಾರ ೨ ಸಾವಿರ ಕನ್ನಡ ಕಾವ್ಯಗಳನ್ನು ತಲಾ ಒಂದೊಂದು ಸೂಚಿ ಒಳಗೊಂಡಿರುವುದು ವಿಶೇಷ.

**ಪೂರ್ಣಗೊಳಿಸಿದ ವೈಯಕ್ತಿಕ ಯೋಜನೆಗಳು**

**೧. ಕನ್ನಡ ದಾಖಲು ಸಾಹಿತ್ಯ :** ೧೯೯೮ನೇ ಸಾಲಿನಲ್ಲಿ ಕೈಗೊಂಡ ಈ ಯೋಜನೆಯು ಕನ್ನಡ ದಾಖಲು ಸಾಹಿತ್ಯದ ಕ್ಷಿತಿಜವನ್ನು ವಿಸ್ತರಿಸುವ, ಶಾಸ್ತ್ರ ಸಮ್ಮುಖ ಅಧ್ಯಯನ ಮಾಡಿರುವುದು ಈ ಯೋಜನೆಯ ವಿಶೇಷ. ಶಾಸನ, ಕಡತ, ನಿರೂಪ, ಬಿನ್ನವತ್ತಳೆ, ನಾಮೆ, ಕೈಫಿಯತ್ತು, ಬಖೈರು, ವಂಶಾವಳಿ, ದಿನಚರಿ, ಸ್ಥಳನಾಮ-ಮಹಾತ್ಮ್ಯೆಗಳನ್ನು ಒಳಗೊಂಡ ದಾಖಲು ಸಾಹಿತ್ಯ ಪ್ರಕಾರದ ಸಮಗ್ರ ಪರಿಚಯವನ್ನೊಳಗೊಂಡಿದೆ. ಈ ಯೋಜನೆಯ ಸಹಾಯದಿಂದ ಕರ್ನಾಟಕದ ನಿರೂಪ, ದಿನಚರಿ, ಬಿನ್ನವತ್ತಳೆ, ನಾಮೆ, ಬಖೈರುಗಳ ಸಮಗ್ರ ಪ್ರಕಟಣಾ ಯೋಜನೆಯನ್ನು ಸಂಪುಟಗಳ ರೂಪದಲ್ಲಿ ಹೊರತರುವ ನಿಟ್ಟಿನಲ್ಲಿ ವಿದ್ವಾಂಸರ ಗಮನವನ್ನು ಸೆಳೆದಿರುವ ವಿದ್ವತ್ ಯೋಜನೆಯಾಗಿದೆ.

**೨. ಬಸವಯುಗದ ವಚನೇತರ ಸಾಹಿತ್ಯ :** ೧೯೯೯ರಲ್ಲಿ ಕೈಗೊಂಡ ಈ ಯೋಜನೆ ಕನ್ನಡ ನಾಡಿನ ಶಿವಶರಣರಿಗೆ ಜಾಗತಿಕ ಗೌರವವನ್ನು ತಂದುಕೊಟ್ಟಿದ್ದು ವಚನಸಾಹಿತ್ಯ, ಇದರ ಜೊತೆಗೆ ಶಿವಶರಣರು ಕರಣಹಸಿಗೆ, ಮಂತ್ರಗೋಪ್ಯ, ದೀಕ್ಷಾ ವಿಧಾನ, ಮಿಶ್ರಾರ್ಪಣ, ಕಾಲಜ್ಞಾನಗಳಂಥ ವಚನೇತರ ಸಾಹಿತ್ಯವನ್ನು ರಚಿಸಿದ್ದಾರೆ, ಹಸ್ತಪ್ರತಿಗಳ ಒಡಲಲ್ಲಿದ್ದ ಈ ಸಾಹಿತ್ಯವನ್ನು ಪರಿಷ್ಕರಿಸಿ ಸಂಪಾದಿಸಿದ ಈ ಯೋಜನೆಗೆ ಶರಣಸಾಹಿತ್ಯದ ಇನ್ನೊಂದು ಮುಖವನ್ನು ಕನ್ನಡಿಗರಿಗೆ ತೋರಿಸಿದ ಹೆಗ್ಗಳಿಕೆ ಸಲ್ಲುತ್ತದೆ.

**೩. ಕನ್ನಡ ಜೈನ ಹಾಡುಗಳು :** ೨೦೦೧ರಲ್ಲಿ ಕೈಗೊಂಡ ಈ ಯೋಜನೆಯು ಹಂಪಿ ಉತ್ಸವದ ಅಂಗವಾಗಿ ಕೈಗೆತ್ತಿಕೊಂಡಿರುವುದಾಗಿದೆ. ಕರ್ನಾಟಕದ ಬೇರೆ ಬೇರೆ ಸಂಸ್ಥೆಗಳಲ್ಲಿರುವ ಹಸ್ತಪ್ರತಿಗಳನ್ನು ಪರಿಶೀಲಿಸಿ ಅವುಗಳಲ್ಲಿರುವ ಜೈನಹಾಡುಗಳನ್ನು ಸಂಪಾದಿಸಿಕೊಟ್ಟಿರುವುದು ವಿಶೇಷ. ಜೈನರ ಹಾಡುಗಳು ರತ್ನಾಕರನ ಹಾಡುಗಳು, ತೀರ್ಥಂಕರರ ಹಾಡುಗಳು, ಯಕ್ಷಯಕ್ಷಿಣಿಯರ ಹಾಡುಗಳು, ಮಂಗಳಾರತಿ ಪದಗಳು, ಶೋಭಾನೆಯ ಹಾಡುಗಳೆಂದು ದೊರೆಯುತ್ತವೆ. ನಾಡಿನ ಜೈನರ ಸ್ಥಳಕೇಂದ್ರಗಳನ್ನು ಅವುಗಳ ಚರಿತ್ರೆಯನ್ನು ಅಧ್ಯಯನ ಮಾಡುವವರಿಗೆ ಈ ಯೋಜನೆ ಸೂಚನೆ ನೀಡುತ್ತದೆ.

**೪. ಗುಂಡಬ್ರಹ್ಮಯ್ಯಗಳ ಸಾಹಿತ್ಯ :** ೨೦೦೨ನೇ ಸಾಲಿನಲ್ಲಿ ಆರಂಭಿಸಿದ ಈ ಯೋಜನೆ ಕಲ್ಯಾಣಕ್ರಾಂತಿಯ ನಂತರ ಮರೆಹೊಕ್ಕವರ ಕಾಯ್ವವೆಂಬ ವ್ರತ ತೊಟ್ಟ ಓರಂಗಲ್ಲಿನ ಗುಂಡಬ್ರಹ್ಮಯ್ಯರೆಂಬ ಶಿವಶರಣರನ್ನು ಕುರಿತು ತ್ರಿಪದಿ, ಸಾಂಗತ್ಯ, ಗದ್ಯ, ಜಾನಪದ ಪ್ರಕಾರಗಳಲ್ಲಿ ಒಟ್ಟು ೬ ಕೃತಿಗಳು ರಚನೆಯಾಗಿದೆ. ಅಪ್ರಕಟಿತ ಸ್ಥಿತಿಯಲ್ಲಿದ್ದ ಹಸ್ತಪ್ರತಿಗಳನ್ನು ಸಂಗ್ರಹಿಸಿ ಪರಿಷ್ಕರಿಸಿ ಸಂಪಾದಿಸಿ ಕೊಡಲಾಗಿದೆ. ಕರ್ನಾಟಕದಲ್ಲಿರುವ ಗುಂಡಬ್ರಹ್ಮಯ್ಯಗಳ ಶಿಲ್ಪಗಳ ಅಧ್ಯಯನವನ್ನು ಈ ಯೋಜನೆಯಲ್ಲಿ ಕೈಗೊಳ್ಳಲಾಗಿದೆ. ಕನ್ನಡದಲ್ಲಿ ಗುಂಡಬ್ರಹ್ಮಯ್ಯಗಳ ಸಾಹಿತ್ಯ ಎಂಬ ಗಂಭೀರ ಅಧ್ಯಯನಕ್ಕೆ ಆಕರ ಒದಗಿಸಿದ ಶ್ರೇಯಸ್ಸು ಈ ಯೋಜನೆಗೆ ಸಲ್ಲುತ್ತದೆ.

**೫. ಕನ್ನಡ ಟೀಕಾ ಸಾಹಿತ್ಯ :** ೨೦೦೩ರಲ್ಲಿ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ. ಪ್ರಾಚೀನ ಕಾಲದ ಕಾವ್ಯ, ವಚನ, ಶಾಸ್ತ್ರಗಳಿಗೆ ಟೀಕು ಬರೆಯಲಾಗುತ್ತಿತ್ತು. ಈ ಟೀಕಾ ಸಾಹಿತ್ಯಕ್ಕೆ ಕನ್ನಡದಲ್ಲಿ ಚಾರಿತ್ರಿಕ ಪರಂಪರೆಯಿದೆ. ಜೈನ ಲಿಂಗಾಯತ ಮತ್ತು ಬ್ರಾಹ್ಮಣ ಟೀಕಾಚಾರ್ಯರು ಹಾಗೂ ಟೀಕಿನ ಮತಗಳು ಕರ್ನಾಟಕದಲ್ಲಿರುವುದನ್ನು ಈ ಯೋಜನೆ ನಿರೂಪಿಸಿದೆ. ಪ್ರಾಚೀನ ಶಾಸನ ನಿಘಂಟು, ಕಾವ್ಯಗಳಲ್ಲಿ ಉಲ್ಲೇಖಿತಗೊಂಡ ಅರ್ಥಲಕ್ಷಣವನ್ನು ಹಾಗೂ ಟೀಕಾ ಸಾಹಿತ್ಯಕ್ಕೆ ಜೈನ, ಲಿಂಗಾಯತ ಹಾಗೂ ವೈದಿಕರ ಕೊಡುಗೆಯನ್ನು ಟೀಕಾ ಸಾಹಿತ್ಯದ ಮೂಲಕ ಪುನರ್ರಚಿಸುವುದು ಈ ಯೋಜನೆಯಿಂದ ಸಾಧ್ಯವಾಗಿದೆ.

**೬. ಉದ್ಧರಣ ಸಾಹಿತ್ಯ ಸಂಪಾದನೆ :** ೨೦೦೫ರಲ್ಲಿ ಕೈಗೊಂಡ ಯೋಜನೆ. ಪ್ರಾಚೀನ ಹಸ್ತಪ್ರತಿಗಳಲ್ಲಿ ಚಿತ್ರ ಸಾಹಿತ್ಯದ ಮೂಲಕ ವೀರಶೈವ ತತ್ವವನ್ನು ಪ್ರತಿಪಾದಿಸುವ ವಿನೂತನ ಉಪಕ್ರಮ ನಡೆದಿರುವುದು ಚಾರಿತ್ರಿಕ ಸಂಗತಿ. ನಮ್ಮ ಹಸ್ತಪ್ರತಿಗಳನ್ನು ಕೇವಲ ಸಾಹಿತ್ಯ, ಶಾಸ್ತ್ರ ಮುಖವಾಗಿ ಮಾತ್ರ ನೋಡದೆ ಅವುಗಳಲ್ಲಿಯ ಚಿತ್ರ ಸಂಪತ್ತನ್ನೂ ಸಹ ಅಧ್ಯಯನ ಮಾಡಬೇಕಾಗಿರುವ ಅಗತ್ಯಕ್ಕನುಗುಣವಾಗಿ ಈ ಯೋಜನೆಯನ್ನು ಕೈಗೊಳ್ಳಲಾಗಿದೆ. ಅನಾದಿ ಜಂಗಮೋದ್ಧರಣೆ, ಉದ್ವಕುಂಡಲಿ ಹಾಗೂ ಅಧೋಕುಂಡಲಿ ಉದ್ಧರಣೆ ಇತ್ಯಾದಿಯಾಗಿ ೩೮ ತರಹದ ಉದ್ಧರಣೆಗಳ ವಾಚ್ಯ ಹಾಗೂ ಪಟಲಗಳನ್ನು ಒಂದು ಕಡೆ ಸಂಯೋಜಿಸಿದ ಯೋಜನೆ ಇದಾಗಿದೆ.

**೭. ಬಳ್ಳಾರಿ ಜಿಲ್ಲಾ ಶಾಸನೋಕ್ತ ಸ್ಥಳನಾಮಗಳು ಸಾಂಸ್ಕೃತಿಕ ಅಧ್ಯಯನ :** ಇದು ೨೦೦೬ರಲ್ಲಿ ಕೈಗೊಂಡ ಯುಜಿಸಿ ಅನುದಾನಿಕ ಪ್ರಧಾನ ಸಂಶೋಧನ ಯೋಜನೆ. ಜಿಲ್ಲೆಯ ಒಂದು ಸಾವಿರ ಶಾಸನಗಳಲ್ಲಿ ಉಲ್ಲೇಖಿತವಾದ ಸ್ಥಳನಾಮ, ಗ್ರಾಮನಾಮಗಳ ಅಧ್ಯಯನವನ್ನು ಭೌಗೋಳಿಕ, ಭಾಷಿಕ ಹಾಗೂ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ನಿರೂಪಿಸಿರುವುದು. ಶಾಸನೋಕ್ತ ಸ್ಥಳನಾಮಗಳಲ್ಲಿಯ ಗ್ರಾಮನಾಮಗಳು ಇಂದು ಪರಿವರ್ತಿತ ಹೆಸರಿನಲ್ಲಿ ಚಲಾವಣೆಯಲ್ಲಿದೆ. ಅವುಗಳ ಪ್ರಾಚೀನ ಭಾಷಿಕ ರೂಪ ಹಾಗೂ ಜನವದಂತಿ, ಐತಿಹ್ಯಗಳನ್ನು ಇಲ್ಲಿ ಬಳಸಿಕೊಂಡು ಸ್ಥಳನಾಮ ಅಧ್ಯಯನದ ಸಾಮಾಜಿಕ, ಧಾರ್ಮಿಕ, ಪರಿಸರನಿಷ್ಟ ಅಧ್ಯಯನವನ್ನು ಈ ಯೋಜನೆಯಲ್ಲಿ ಪೂರೈಸಲಾಗಿದೆ.

**೧೨. ಪ್ರಗತಿಯಲ್ಲಿರುವ ಯೋಜನೆಗಳು**

**೧. ಕನ್ನಡ ಕಾವ್ಯೋಕ್ತ ಕವಿಚರಿತೆ :** ಕರ್ನಾಟಕ ಕವಿಚರಿತೆಯ ಕಲ್ಪನೆ ಮೊದಲಿನಿಂದಲೂ ನಮ್ಮ ಕವಿಗಳಿಗೆ ಇತ್ತೆಂಬುದಕ್ಕೆ ಪೂರ್ವ ಸೂರಿಗಳನ್ನು ತಮ್ಮ ಕಾವ್ಯದಲ್ಲಿ ಸ್ಮರಿಸುವ ಪರಿಪಾಠ ಬೆಳೆದುಬಂದಿದೆ. ಇದರಿಂದ ಕೆಲವು ಕನ್ನಡ ಕಾವ್ಯಗಳು ಲಭ್ಯ ಇಲ್ಲದಿದ್ದರೂ, ಮುಂದಿನ ಕವಿಗಳ ಸ್ಮರಣೆಯ ಮೂಲಕ ಅವುಗಳ ಅಸ್ತಿತ್ವವನ್ನು ಗುರುತಿಸಲು ಸಾಧ್ಯವಾಗಿದೆ. ಬಸವರಾಜದೇವರ ರಗಳೆಯನ್ನು ಹರಿಹರ, ಹರಿಹರನ ಮಹತ್ವವನ್ನು ರಾಘವಾಂಕ, ರಾಘವಾಂಕ ಚರಿತೆಯನ್ನು ಸಿದ್ಧನಂಜೇಶ ಬರೆಯುವುದರ ಮೂಲಕ ಪೂರ್ಣಪ್ರಮಾಣದ ಕವಿಚರಿತೆಗೆ ಶ್ರೀಕಾರ ಹಾಕಿದರು. ಇಂಥ ಪ್ರಯತ್ನಗಳನ್ನು ಕಾವ್ಯೋಕ್ತ ಕವಿಚರಿತೆಯ ಯೋಜನೆಯ ಮೂಲಕ ದಾಖಲಿಸುವುದು ಇಲ್ಲಿ ಸಾಧ್ಯವಾಗುತ್ತದೆ. ೨೦೦೮ರಲ್ಲಿ ಕೈಗೊಂಡ ಈ ಯೋಜನೆ ಹಲವು ಕಾವ್ಯ, ಹಸ್ತಪ್ರತಿ, ಶಾಸನಗಳನ್ನು ಆಧರಿಸಿ ನಡೆಸುವ ಇಲ್ಲವೇ ಪೂರೈಸುವ ಯೋಜನೆ ಇದಾಗಿದೆ.

**೨. ಹಸ್ತಪ್ರತಿಗಳ ಮುಖೇನ ಪ್ರಾಚೀನ ಕನ್ನಡಿಗರ ಬದುಕು :** ಹಸ್ತಪ್ರತಿಗಳು ನಾಡಿನ ಸಂಪತ್ತು. ಇವುಗಳ ಸಾಂಸ್ಕೃತಿಕ ಅಧ್ಯಯನವೆಂದರೆ ಕನ್ನಡಿಗರ ಬದುಕಿನ ಅಧ್ಯಯನವಾಗಿದೆ. ಹಸ್ತಪ್ರತಿ ಲಿಪಿಕಾರರು, ಚಿತ್ರಕಾರರು, ತಯಾರಕರು, ಸಂರಕ್ಷಕರು, ಎಲ್ಲರನ್ನು ಇವುಗಳ ಮೂಲಕ ನೋಡಬಹುದಾಗಿದೆ. ಅವರ ಸಾಮಾಜಿಕ ಸಂಬಂಧ, ಧಾರ್ಮಿಕ ಮನೋಭಾವ, ಆರ್ಥಿಕ ಪರಿಸ್ಥಿತಿಗಳನ್ನು ಹಸ್ತಪ್ರತಿಗಳಲ್ಲಿ ಕಾಣಬಹುದಾಗಿದೆ. ಶೀಘ್ರಲಿಪಿಕಾರರು, ಚಿತ್ರಲಿಪಿಕಾರರು, ಸಣ್ಣಲಿಪಿಕಾರರು, ಅಲಂಕಾರಲಿಪಿಕಾರರಲ್ಲದೆ ಬಡಿಗಾರರು, ವಸ್ತ್ರಕಾಯಕದವರು, ಮಸಿಕಾಯಕದವರ ಬದುಕನ್ನು ಇವುಗಳ ಮೂಲಕ ಕಟ್ಟಿಕೊಡಲು ಸಾಧ್ಯವಾಗುತ್ತದೆ. ೨೦೦೬ರಲ್ಲಿ ಶಾಸ್ತ್ರೀಯ ಭಾಷಾ ಯೋಜನೆಯಡಿಯಲ್ಲಿ ಕೈಗೊಂಡ ಯೋಜನೆ ಇದಾಗಿದೆ.

**೧೩. ಪ್ರಕಟಣೆಗಳು**

**ವಿಶ್ವವಿದ್ಯಾಲಯದಿಂದ ಪ್ರಕಟಿತ ಕೃತಿಗಳು**

**೧. ಕನ್ನಡ ದಾಖಲು ಸಾಹಿತ್ಯ :** ಕನ್ನಡ ದಾಖಲು ಸಾಹಿತ್ಯ ಹಸ್ತಪ್ರತಿಶಾಸ್ತ್ರ ವಿಭಾಗ ಮಾಲೆಯ ಮೂರನೆ ಪ್ರಕಟಣೆ. ಈ ಕೃತಿಗೆ ೨೦೦೦ನೇ ಸಾಲಿನ ಸಂಶೋಧನ ಪ್ರಕಾರದ ಉತ್ತಮ ಕೃತಿಯೆಂದು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಲಭಿಸಿದೆ. ನಾಡಿನ ಇತಿಹಾಸದ ರಚನೆಯಲ್ಲಿ ಅನೇಕ ವಿಧವಾದ ಆಕರಗಳು ನೆರವಾಗುತ್ತವೆ. ಅವುಗಳನ್ನು ವಸ್ತು, ಜ್ಞಾನ, ಕ್ರಿಯೆ ಹಾಗೂ ಭಾಷಾ ಸಾಮಗ್ರಿಗಳೆಂದು ಗುರುತಿಸಲಾಗುತ್ತಿದೆ. ಈ ನಾಲ್ಕು ತೆರನಾದ ಸಾಮಾಗ್ರಿಗಳಲ್ಲಿ ಭಾಷಾ ಸಾಮಾಗ್ರಿಗಳಿಗೆ ಮಹತ್ವ ಹೆಚ್ಚು. ಯಾಕೆಂದರೆ ವಸ್ತು, ಜ್ಞಾನ, ಕ್ರಿಯೆಗಳನ್ನು ಭಾಷೆ ಪ್ರತಿನಿಧಿಸುತ್ತದೆ. ಈ ಪ್ರತಿನಿಧೀಕರಣ ಲಿಖಿತ ಮತ್ತು ಮೌಖಿಕ ರೂಪದಲ್ಲಿರುತ್ತದೆ. ಇದರಲ್ಲಿ ಲಿಖಿತ ಭಾಷಾ ಉತ್ಪಾದನೆಗಳಾಗಿ ಶಾಸನ, ಕಡತ, ನಿರೂಪ, ಬಿನ್ನವತ್ತಳೆ, ದಿನಚರಿ, ಕೈಫಿಯತ್ತು, ಬಖೈರು, ನಾಮೆ, ಸ್ಥಳಪುರಾಣ ಮಹಾತ್ಮೆಗಳು ರಚನೆಗೊಂಡಿವೆ. ಈ ಎಲ್ಲ ಪ್ರಕಾರಗಳ ಅರ್ಥ, ಸ್ವರೂಪ, ಲಕ್ಷಣ, ಮತ್ತು ಪ್ರಯೋಜನವನ್ನು ಕುರಿತು ಪ್ರಸ್ತುತ ಕೃತಿ ವಿಶ್ಲೇಷಿಸುತ್ತದೆ. ಸುಮಾರು ೨೦೦ ವರ್ಷಗಳ ಇತಿಹಾಸವಿರುವ ಈ ಆಕರಗಳನ್ನು ಕುರಿತು ನಡೆದ ಅಧ್ಯಯನಗಳನ್ನು ಕೊನೆಯಲ್ಲಿ ಸಮೀಕ್ಷಿಸಲಾಗಿದೆ. ಸಂಶೋಧನ ಗ್ರಂಥವೊಂದರ ಸೈದ್ಧಾಂತಿಕ ವಿಧಿ ವಿಧಾನಗಳನ್ನು ಅನುಸರಿಸುವ ದೃಷ್ಟಿಯಿಂದ ಈ ಗ್ರಂಥ ಶಾಸ್ತ್ರೀಯವಾಗಿದೆ. ಕನ್ನಡ ದಾಖಲು ಸಾಹಿತ್ಯ ಅಧ್ಯಯನ ಮಾದರಿಯ ಸ್ವತಂತ್ರ ಅಸ್ತಿತ್ವವನ್ನು ಪಡೆದ ಆದ್ಯಕೃತಿ ಇದಾಗಿದೆ. ೨೦೦೯ರಲ್ಲಿ ಪರಿಷ್ಕೃತ ಆವೃತ್ತಿಯಾಗಿ ಮರುಮುದ್ರಣಗೊಂಡಿದೆ.

**೨. ಬಸವಯುಗದ ವಚನೇತರ ಸಾಹಿತ್ಯ :** ಈ ಕೃತಿ ವಿಭಾಗ ಮಾಲೆಯ ಎಂಟನೆಯ ಪ್ರಕಟಣೆ. ಈ ಕೃತಿಗೆ ೨೦೦೦ನೇ ಸಾಲಿನ ವೀರಶೈವ ಶ್ರೇಷ್ಠ ಕೃತಿಯೆಂದು ಮೈಸೂರಿನ ಶ್ರೀ ಸುತ್ತೂರು ಶಿವರಾತ್ರೀಶ್ವರ ಪ್ರಶಸ್ತಿ ಲಭಿಸಿದೆ. ೧೨ನೆಯ ಶತಮಾನವೆಂದಾಕ್ಷಣ ನೆನಪಿಗೆ ಬರುವುದು ವಚನಸಾಹಿತ್ಯ. ಆದರೆ ಅದೇ ಕಾಲದಲ್ಲಿ ಅದೇ ವಚನಕಾರರಿಂದ ವಚನೇತರ ಸಾಹಿತ್ಯವೆಂಬ ವಿನೂತನ ಪ್ರಕಾರಗಳು ಸೃಷ್ಟಿಯಾಗಿವೆ. ಅವುಗಳನ್ನು ಕಾಲಜ್ಞಾನ, ಸ್ವರವಚನ, ಕರಣಹಸುಗೆ, ವಿಶ್ರಾರ್ಪಣ, ಮಂತ್ರಗೋಪ್ಯ, ಸಕೀಲಗಳು, ಸೃಷ್ಟಿಯವಚನ, ಘಟಚಕ್ರ, ದೀಕ್ಷಾವಿಧಾನ, ಕೊರವಂಜಿ ಸಾಹಿತ್ಯ ಇತ್ಯಾದಿ ಹೆಸರಿನಿಂದ ಉಳಿದು ಬಂದಿರುವುದನ್ನು ಕಾಣುತ್ತೇವೆ. ಅವುಗಳನೆಲ್ಲ ಸಂಸ್ಕರಿಸಿ ವಚನೇತರ ಸಾಹಿತ್ಯವೆಂಬ ತಲೆಬರಹದಡಿ ಸಂಪಾದಿಸಿಕೊಡಲಾಗಿದೆ. ಪ್ರಸ್ತಾವನೆಯಲ್ಲಿ ಆಯಾ ಪ್ರಕಾರಗಳ ಲಕ್ಷಣ, ಸ್ವರೂಪ ಹಾಗೂ ವಸ್ತುವನ್ನು ಕುರಿತು ಪರಿಚಯಿಸಲಾಗಿದೆ. ಅನುಬಂಧಗಳಲ್ಲಿ ಹಾಡುಗಬ್ಬಗಳಾದ ತ್ರಿವಿಧಿ ಸ್ವರವಚನಗಳ ಅಕಾರಾದಿಯನ್ನು ನೀಡಲಾಗಿದೆ. ೨೨ ಜನ ವಚನಕಾರರು ಸೃಷ್ಟಿಸಿದ ಈ ಸಾಹಿತ್ಯವನ್ನು ಶಾಸ್ತ್ರೀಯವಾಗಿ ಸಂಪಾದಿಸಲಾಗಿದೆ. ಈಗಾಗಲೇ ಶರಣರಿಗೆ ಜಗತ್ತಿನ ಪ್ರಸಿದ್ಧಿಯನ್ನು ಅವರ ವಚನಗಳು ತಂದುಕೊಟ್ಟಿದ್ದರೆ ವಚನೇತರ ಸಾಹಿತ್ಯವಾದ ಕರಣಹಸುಗೆ, ವಿಶ್ರಾರ್ಪಣ, ಮಂತ್ರಗೋಪ್ಯ ಇತ್ಯಾದಿ ಪ್ರಕಾರದ ಸಾಹಿತ್ಯವನ್ನೆಲ್ಲ ಸಂಗ್ರಹಿಸಿ ಸಂಸ್ಕರಿಸಿ, ಸಂಪಾದಿಸಿರುವುದರಿಂದ ಶರಣ ಸಾಹಿತ್ಯದ ಇನ್ನೊಂದು ಮುಖವನ್ನು ನಾಡಿಗೆ ಪರಿಯಿಸಿರುವುದು ಈ ಕೃತಿಯ ಹೆಗ್ಗಳಿಕೆಯಾಗಿದೆ.

**೩. ಕನ್ನಡ ಟೀಕಾ ಸಾಹಿತ್ಯ :** ಈ ಕೃತಿ ವಿಭಾಗಮಾಲೆಯ ಇಪ್ಪತ್ತೊಂಭತ್ತನೆಯ ಪ್ರಕಟಣೆ. ಕನ್ನಡ ಕಾವ್ಯಗಳಿಗೆ ಟೀಕು, ವ್ಯಾಖ್ಯಾನ ಬರೆದ ಟೀಕಾಚಾರ್ಯರನ್ನು ಹಾಗೂ ಅವರ ಕೃತಿಗಳನ್ನು ವಿಶ್ಲೇಷಿಸಿದ ಸಂಶೋಧನಾತ್ಮಕ ಗ್ರಂಥವಾಗಿದೆ. ಇಲ್ಲಿ ಟೀಕಾ ಸಾಹಿತ್ಯದ ಅರ್ಥ, ಉಗಮ, ಸ್ವರೂಪ ಲಕ್ಷಣಗಳಲ್ಲದೆ ಜೈನ, ಲಿಂಗಾಯತ ಹಾಗೂ ಬ್ರಾಹ್ಮಣ ಸಾಹಿತ್ಯಕ್ಕೆ ರಚನೆಗೊಂಡ ಟೀಕಾ ಕೃತಿಗಳನ್ನು ದಾಖಲಿಸಲಾಗಿದೆ. ಟೀಕಾ ಸಾಹಿತ್ಯದ ನೆಲೆಗಳು, ಅದರ ಮಹತ್ವವನ್ನು ಕುರಿತು ಚರ್ಚಿಸಲಾಗಿದೆ. ಅನುಬಂಧದಲ್ಲಿ ಜೈನ, ಲಿಂಗಾಯತ ಹಾಗೂ ಬ್ರಾಹ್ಮಣ ಟೀಕಾಕಾರರು ಹಾಗೂ ಟೀಕಿನ ಗ್ರಂಥಗಳ ಯಾದಿಯನ್ನು ನೀಡಲಾಗಿದೆ. ಕನ್ನಡ ಟೀಕಾಸಾಹಿತ್ಯ ಕುರಿತು ಸ್ವತಂತ್ರ ಅಧ್ಯಯನ ಮಾಡುವವರಿಗೆ ಆಕರವಾಗಿದೆ. ಇದು ೨೦೦೬ರಲ್ಲಿ ಪ್ರಕಟಗೊಂಡಿದೆ.

**೪. ಗುಂಡಬ್ರಮ್ಹಯ್ಯಗಳ ಸಾಹಿತ್ಯ :** ಈ ಕೃತಿ ವಿಭಾಗ ಮಾಲೆಯ ಇಪ್ಪತ್ನಾಲ್ಕನೆಯ ಪ್ರಕಟಣೆ. ಮರೆಹೊಕ್ಕವರ ಕೊಡೆವೆಂಬ ವ್ರತವನ್ನು ಆಚರಿಸಿದ ಗುಂಡಯ್ಯ ಬ್ರಹ್ಮಯ್ಯರೆಂಬ ಭಾವ ಮೈದುನ ಶಿವಭಕ್ತರ ಕಥೆ ಇಲ್ಲಿಯ ವಸ್ತು. ಕನ್ನಡದಲ್ಲಿ ತ್ರಿಪದಿ, ಚೌಪದಿ, ಸಾಂಗತ್ಯ, ಗದ್ಯ, ನಾಂದ್ಯ ಹಾಗೂ ಹಾಡುಗಳಲ್ಲಿ ಇವರ ಸಾಹಿತ್ಯ ರಚನೆಯಾಗಿದೆ. ಕರ್ನಾಟಕದ ಹಸ್ತಪ್ರತಿ ಭಂಡಾರಗಳಲ್ಲಿ ಸಂಗ್ರಹಿತವಾಗಿದ್ದ ಹಸ್ತಪ್ರತಿಗಳನ್ನು ಪರಾಮರ್ಶಿಸಿ, ಪರಿಷ್ಕರಿಸಿ ಕಾವ್ಯಗಳನ್ನು ಇಲ್ಲಿ ಸಂಪಾದಿಸಿ ಕೊಡಲಾಗಿದೆ. ೩ ಜನ ಕವಿಗಳು ಹೊಸದಾಗಿ ದಾಖಲಾಗಿದ್ದಾರೆ. ಓರಂಗಲ್ಲಿನ ಅರಸು ಮನೆತನ, ವೀರಶೈವ ಧರ್ಮ ಪ್ರಸಾರ, ಶೂಲದ ಹಬ್ಬದ ಅನುಷ್ಠಾನ ಇತ್ಯಾದಿ ಸಂಗತಿಗಳನ್ನುಳ್ಳ ಪ್ರಸ್ತಾವನೆಯ ಮೂಲಕ ಈ ಕೃತಿ ಸಂಪಾದಿತಗೊಂಡಿದೆ. ಗುಂಡಬ್ರಹ್ಮಯ್ಯಗಳ ಸಾಹಿತ್ಯ

ಶಿಲ್ಪಗಳ ಸಮಗ್ರ ಮಾಹಿತಿಯನ್ನುಳ್ಳ ಈ ಕೃತಿ ಅವರ ಕುರಿತು ಅಧ್ಯಯನ ಮಾಡುವವರಿಗೆ ಸಿದ್ಧ ರೂಪದ ಆಕರ ಗ್ರಂಥವೆಂಬ ಹಿರಿಮೆಗೆ ಪಾತ್ರವಾಗಿದೆ. ಇದು ೨೦೦೬ರಲ್ಲಿ ಪ್ರಕಟಗೊಂಡಿದೆ.

**೫. ಕನ್ನಡ ವಿಶ್ವವಿದ್ಯಾಲದ ಹಸ್ತಪ್ರತಿ ಸೂಚಿಸಂಪುಟ–೧ :** ಈ ಸಂಪಾದಿತ ಕೃತಿ ವಿಭಾಗ ಮಾಲೆಯ ಎರಡನೆಯ ಪ್ರಕಟಣೆ. ಹಸ್ತಪ್ರತಿ ವಿಭಾಗದ ಸಾಂಸ್ಥಿಕ ಯೋಜನೆಯಡಿಯಲ್ಲಿ ಬಳ್ಳಾರಿ, ಕೊಪ್ಪಳ, ರಾಯಚೂರು ಇತ್ಯಾದಿ ಜಿಲ್ಲೆಗಳ ಹಸ್ತಪ್ರತಿ ಸರ್ವೇಕ್ಷಣೆ, ಸಂಗ್ರಹ ಮತ್ತು ಸೂಚೀಕರಣ ಎಂಬ ಮೂರು ಹಂತಗಳಲ್ಲಿ ವಿಭಾಗದ ಸದಸ್ಯರು ತಮ್ಮನ್ನು ತೊಡಗಿಸಿಕೊಂಡರು. ಹೀಗಾಗಿ ತಾವು ಸಂಗ್ರಹಿಸಿದ ಹಸ್ತಪ್ರತಿಗಳಲ್ಲಿ ೧ ರಿಂದ ೪೦೦ ಕಟ್ಟುಗಳವರೆಗೆ ದುರಸ್ತಿ ಮಾಡಿ ಅವುಗಳ ಸೂಚಿಯನ್ನು ಸಿದ್ಧಪಡಿಸುವ ಹಿನ್ನಲೆಯಲ್ಲಿ ಈ ಗ್ರಂಥ ರೂಪುಗೊಂಡಿದೆ. ಒಂದು ಹಸ್ತಪ್ರತಿಯ ಸಮಗ್ರ ವಿವರವನ್ನು ಅಂದರೆ ಅದರ ಕರ್ತೃ, ಆತನ ಕಾಲವಿಚಾರ, ಅದರ ವಸ್ತು, ಸ್ಥಿತಿ, ಭಾಷೆ, ಲಿಪಿ, ವಿಶೇಷವಾದ ಗುಣಾವಗುಣಗಳನ್ನು ಪರಿಚಯಿಸುವುದು ಹಸ್ತಪ್ರತಿ ಸೂಚಿಯೆನಿಸಿಕೊಳ್ಳುತ್ತದೆ. ವೈಜ್ಞಾನಿಕ ಗೌರವಗಳಿಂದ ಪೂರೈಸಿದ ಪ್ರಸ್ತುತ ಕೃತಿಯಲ್ಲಿ ೬೨೩ ಕಾವ್ಯಗಳು ತಮ್ಮ ಸ್ವಪರಿಚಯವನ್ನು ನಿವೇದಿಸಿ ಕೊಂಡಿವೆ. ಧಾರ್ಮಿಕ, ಶಾಸ್ತ್ರೀಯ, ಚರಿತ್ರೆ ಹಾಗೂ ಶುದ್ಧ ಸಾಹಿತ್ಯ ಕೃತಿಗಳನ್ನೊಳಗೊಂಡ ಹಸ್ತಪ್ರತಿಗಳ ಅಧ್ಯಯನಕ್ಕೆ ಈ ಸೂಚಿಸಂಪುಟ ಆಕರವಾಗಿದೆ. ಚಿತ್ರ, ಲಿಪಿಕಾರರ ವೈಯಕ್ತಿಕ ವಿಚಾರ, ಪ್ರತಿ ರಚನೆಯ ಸಂದರ್ಭ, ಪರಿಸರ ಹೀಗೆ ಹಲವು ವಿಶೇಷತೆಗಳಿಂದ ಕೂಡಿದ ಹಸ್ತಪ್ರತಿಗಳನ್ನು ಸಂಪುಟ ಒಳಗೊಂಡಿದೆ. ೧೩೭ ಕವಿಗಳ, ೬೮ ಸ್ಥಳನಾಮಗಳ, ೭೦ ಜನ ಲಿಪಿಕಾರರ, ೧೪೬ ಹಸ್ತಪ್ರತಿದಾನಿಗಳ ವಿವರವನ್ನು ಮಾಹಿತಿಗಾಗಿ ಅನುಬಂಧದಲ್ಲಿ ನೀಡಲಾಗಿದೆ. ಈ ಕೃತಿ ಕ್ರಮಬದ್ಧವಾದ ಸಂಗ್ರಹ, ಸೂಚಿರಚನೆ, ಸಮರ್ಪಕವಾದ ಸಂಪಾದನೆಯಿಂದಾಗಿ ಸಂಪಾದಕರ ಪರಿಶ್ರಮದ ಫಲವಾಗಿದೆ. ಇದು ೨೦೦೦ರಲ್ಲಿ ಪ್ರಕಟಗೊಂಡಿದೆ.

**೬. ಕನ್ನಡ ವಿಶ್ವವಿದ್ಯಾಲಯ ಹಸ್ತಪ್ರತಿ ಸೂಚಿ ಸಂಪುಟ–೩ :** ಈ ವಿಭಾಗ ಮಾಲೆಯ ಇಪ್ಪತ್ತೊಂದನೆಯ ಪ್ರಕಟಣೆ. ಹಸ್ತಪ್ರತಿ ವಿಭಾಗದ ಸಾಂಸ್ಥಿಕ ಯೋಜನೆಯಡಿಯಲ್ಲಿ ಹಸ್ತಪ್ರತಿಗಳ ಸವೇಕ್ಷಣೆ, ಸಂಗ್ರಹ ಮತ್ತು ಸೂಚಿರಚನೆ ಎಂಬ ಮೂರು ಹಂತಗಳಲ್ಲಿ ವಿಭಾಗದ ಸದಸ್ಯರು ದುಡಿಯುತ್ತಿದ್ದಾರೆ. ಹೀಗಾಗಿ ನಾಡಿನ ಬೇರೆ ಬೇರೆ ವಿಭಾಗಗಳಿಂದ ಸಂಗ್ರಹಿಸಿದ ಹಸ್ತಪ್ರತಿಗಳಲ್ಲಿ ೮೦೧ ರಿಂದ ೧೨೦೦ ಕಟ್ಟುಗಳವರೆಗೆ ದುರಸ್ತಿ ಮಾಡಿ ಅವುಗಳ ಸೂಚಿಯನ್ನು ಸಿದ್ಧಪಡಿಸುವ ಹಿನ್ನೆಲೆಯಲ್ಲಿ ಈ ಗ್ರಂಥ ರೂಪುಗೊಂಡಿದೆ. ಒಂದು ಹಸ್ತಪ್ರತಿಯಲ್ಲಿಯ ಕೃತಿಯ ಹೆಸರು, ಕವಿನಾಮ, ಕಾಲ, ಭಾಷೆ, ಲಿಪಿ, ಹಸ್ತಪ್ರತಿಯ ಸ್ಥಿತಿ ಮುಂತಾಗಿ ಅದರ ಸ್ವರೂಪವನ್ನು ಪರಿಚಯಿಸುವುದು ಸೂಚಿಯೆನಿಸುತ್ತದೆ. ಈ ಕೃತಿಯಲ್ಲಿ ೫೫೫ ಕಾವ್ಯಗಳು ತಮ್ಮ ಸ್ವಪರಿಚಯವನ್ನು ನಿವೇದಿಸಿಕೊಂಡಿವೆ. ಧಾರ್ಮಿಕ, ಶಾಸ್ತ್ರೀಯ, ಚರಿತ್ರೆ ಹಾಗೂ ಸಾಹಿತ್ಯ ಕೃತಿಗಳನ್ನೊಳಗೊಂಡ ಹಸ್ತಪ್ರತಿಗಳ ಅಧ್ಯಯನಕ್ಕೆ ಆಕರವಾಗಿದೆ. ಚಿತ್ರಸಾಹಿತ್ಯ, ಲಿಪಿಕಾರರ ವೈಯಕ್ತಿಕ ವಿಚಾರ, ಪ್ರತಿ ರಚನೆಯ ಪರಿಸರ ಸಂದರ್ಭಗಳನ್ನು ಈ ಸಂಪುಟದಲ್ಲಿ ಹೇಳಲಾಗಿದೆ. ೧೧೨ ಕವಿಗಳ, ೬೩ ಜನ ಲಿಪಿಕಾರರ, ೭೪ ಲಿಪಿಕಾರರ ಸ್ಥಳಗಳು, ೭೨ ಜನ ಹಸ್ತಪ್ರತಿ ದಾನಿಗಳ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ. ಸಮರ್ಪಕ ಸೂಚಿ ಕಾರ್ಯದಿಂದಾಗಿ ಸಂಪಾದಕರ ಪರಿಶ್ರಮವನ್ನು ಪ್ರಕಟಪಡಿಸುತ್ತದೆ. ಇದು ೨೦೦೬ರಲ್ಲಿ ಪ್ರಕಟಗೊಂಡಿದೆ.

**೭. ಹಸ್ತಪ್ರತಿ ವ್ಯಾಸಂಗ–೨ :** ಈ ಕೃತಿ ವಿಭಾಗ ಮಾಲೆಯ ಹದಿಮೂರನೆಯ ಪ್ರಕಟಣೆ. ಮೇಲುಕೋಟೆಯಲ್ಲಿ ಆಯೋಜಿಸಿದ್ದ ಕನ್ನಡ ಹಸ್ತಪ್ರತಿ ಭಂಡಾರಗಳು ಎಂಬ ವಿಚಾರ ಸಂಕಿರಣದಲ್ಲಿ ಮಂಡಿತವಾದ ಪ್ರಬಂಧಗಳ ಸಂಕಲನ. ೯ ಜನ ವಿದ್ವಾಂಸರು ಹಸ್ತಪ್ರತಿ ಭಂಡಾರಗಳನ್ನು ಕುರಿತು ತಮ್ಮ ಅಭಿಪ್ರಾಯಗಳನ್ನು ಪ್ರಬಂಧ ರೂಪದಲ್ಲಿ ಹೊಸೆದಿದ್ದಾರೆ. ಭಂಡಾರಗಳು ಸರ್ಕಾರಿ, ಸಾರ್ವಜನಿಕ, ಮಠಮಾನ್ಯ ಹೊರನಾಡು ವಿದೇಶಿ ಭಂಡಾರಗಳಲ್ಲದೆ ಕೇಂದ್ರ ಹಸ್ತಪ್ರತಿ ಭಂಡಾರದ ಅಗತ್ಯವನ್ನು ಕುರಿತಾದ ಚಿಂತನೆಗಳು ಇಲ್ಲಿ ಹರಡಿವೆ. ಅನುಬಂಧಗಳಲ್ಲಿ ಧಾರವಾಡ ಕನ್ನಡ ಅಧ್ಯಯಪೀಠದ ಭಂಡಾರ, ಬೆಂಗಳೂರಿನ ಬಿ.ಎಂ.ಶ್ರೀ ಪ್ರತಿಷ್ಠಾನದ ಭಂಡಾರ, ಮತ್ತು ಕನ್ನಡ ವಿ.ವಿ. ಹಸ್ತಪ್ರತಿ ಭಂಡಾರಗಳ ವಿಶೇಷ ಲೇಖನಗಳು ಸೇರ್ಪಡೆಗೊಂಡಿವೆ. ಆಧುನಿಕ ಗ್ರಂಥಭಂಡಾರಗಳಂತೆ ಪ್ರಾಚೀನ ಹಸ್ತಪ್ರತಿ ಭಂಡಾರಗಳು ಮಹತ್ವದ ಮಾಹಿತಿಕೇಂದ್ರಗಳಾಗಿದ್ದವು. ಅವುಗಳನ್ನು ಪೋಷಣೆ ಮಾಡಿಕೊಂಡು ಬಂದ ಅನೇಕ ಸಂಸ್ಥೆಗಳು ಇವೆ. ಹೀಗಾಗಿ ಸೂಕ್ತ ಮತ್ತು ಆಧುನಿಕ ಸೌಲಭ್ಯಗಳಿಂದ ವಂಚಿತವಾಗದಂತೆ ಈ ಭಂಡಾರಗಳ ಸಂರಕ್ಷಣೆಯ ಎಲ್ಲ ಅನುಕೂಲಗಳು ದೊರೆಯಬೇಕೆಂಬುದೇ ಇಲ್ಲಿ ಮಂಡಿತವಾದ ಪ್ರಬಂಧಗಳ ಏಕಾಭಿಪ್ರಾಯವಾಗಿದೆ. ಇದು ೨೦೦೨ರಲ್ಲಿ ಪ್ರಕಟಗೊಂಡಿದೆ.

**೮. ಕನ್ನಡ ಜೈನ ಹಾಡುಗಳು :** ಈ ಕೃತಿ ವಿಭಾಗ ಮಾಲೆಯ ಹನ್ನೊಂದನೆಯ ಪ್ರಕಟಣೆ. ವೀರಶೈವ ತತ್ವಪದಗಳಂತೆ, ಹರಿದಾಸರ ಕೀರ್ತನೆಗಳಂತೆ, ಜೈನರಲ್ಲಿ ಹಾಡುಗಳ ಪ್ರಕಟಣೆಗೆ ೯೦ ವರ್ಷಗಳ ಇತಿಹಾಸವಿದೆ. ಎರ್ತೂರ ಶಾಂತರಾಜಶಾಸ್ತ್ರೀ, ವಿ.ಲೋಕನಾಥಶಾಸ್ತ್ರಿ, ಭುವನಹಳ್ಳಿ ಶ್ರೀಪತಿ ಜೋಯಿಸ್, ಡಾ.ಹಂಪನಾಗರಾಜಯ್ಯ ಮುಂತಾದವರು ಜೈನ ಹಾಡುಗಳ ಪ್ರಕಟಣೆಯಲ್ಲಿ ದುಡಿದ ಮಹನೀಯರು.

ಪ್ರಸ್ತುತ ಕೃತಿಯಲ್ಲಿ ರತ್ನಾಕರನ ೨೨೪, ತೀರ್ಥಂಕರ ೬೪, ಯಕ್ಷಿಣಿಯರ ೧೬, ಜೋಗುಳದ ೧೦, ಶೋಭಾನದ ೭, ಮಂಗಳಾರತಿಯ ೭೬ ಹಾಗೂ ಸಂಕೀರ್ಣದ ೬೨ ಹಾಡುಗಳು ಸೇರಿ ಒಟ್ಟು ೪೬೧ ಹಾಡುಗಳು ಸಂಪಾದಿತಗೊಂಡಿವೆ. ನಾಡಿನಾದ್ಯಂತ ಜೈನಮಠಗಳ ಹಸ್ತಪ್ರತಿ ಭಂಡಾರ, ಸರಕಾರಿ ಸಂಸ್ಥೆಗಳ ಭಂಡಾರಗಳಲ್ಲಿಯ ಹಸ್ತಪ್ರತಿಗಳನ್ನು ಪರಿಶೀಲಿಸಿ

ಇವುಗಳನ್ನು ಸಂಪಾದಿಸಲಾಗಿದೆ. ಪ್ರಸ್ತಾವನೆಯಲ್ಲಿ ಜೈನ ಹಾಡುಗಳ ಲಕ್ಷಣ, ವಸ್ತು ವೈವಿಧ್ಯತೆ ಕುರಿತು ಚರ್ಚಿಸಲಾಗಿದೆ. ಜೈನಪಾರಿಭಾಷಿಕ ಪದಕೋಶ, ನಾಮಸೂಚಿ, ಹಾಡುಗಳ ಅಕಾರಾದಿಗಳನ್ನು ಅನುಬಂಧದಲ್ಲಿ ನೀಡಲಾಗಿದೆ. ಸಮಗ್ರ ಕರ್ನಾಟಕ ಹಸ್ತಪ್ರತಿ ಭಂಡಾರಗಳನ್ನು ಬಳಸಿಕೊಂಡು ಇಷ್ಟು ಮೊತ್ತದ ಹಾಡುಗಳು ಒಂದು ಕಡೆ ಸಂಪಾದನೆಗೊಂಡಿರುವುದು ಮೊದಲ ಪ್ರಯತ್ನವಾಗಿದೆ. ಜೈನಹಾಡುಗಳನ್ನು ಅಧ್ಯಯನ ಮಾಡುವವರಿಗೆ ಇದೊಂದು ಆಕರಕೋಶವಾಗಿದೆ. ಇದು ೨೦೦೧ರಲ್ಲಿ ಪ್ರಕಟಗೊಂಡಿದೆ.

**೯. ಕವಳಿಗೆ :** ಈ ಕೃತಿ ವಿಭಾಗಮಾಲೆಯ ಮೂವತ್ತನೆಯ ಪ್ರಕಟಣೆ. ಹಸ್ತಪ್ರತಿ ವಿಭಾಗ ಆರಂಭವಾಗಿ ಹತ್ತು ವರ್ಷಗಳು ಗತಿಸಿದವು. ಆ ಸಂಬಂಧ ದಶಮಾನೋತ್ಸವದ ಸ್ಮರಣೆಕೆಯಾಗಿ ಕವಳಿಗೆಯನ್ನು ಕಟ್ಟಿಕೊಟ್ಟಿದ್ದಾರೆ. ಇಲ್ಲಿ ಮೂರು ಭಾಗಗಳಿವೆ. ಭಾಗ-೧ರಲ್ಲಿ ವಿಭಾಗದ ಸದಸ್ಯರು ಹಸ್ತಪ್ರತಿ ವಿಭಾಗದ ಶೈಕ್ಷಣಿಕ ಚಟುವಟಿಕೆಗಳನ್ನು ದಾಖಲಿಸಿದ್ದಾರೆ. ಭಾಗ-೨ರಲ್ಲಿ ಗ್ರಂಥ ಸಂಪಾದನೆ ಹಾಗೂ ಹಸ್ತಪ್ರತಿಗಳ ಕ್ಷೇತ್ರದಲ್ಲಿ ತೊಡಗಿಸಿಕೊಂಡ ಹಿರಿಯರ ಚಿಂತನೆಗಳನ್ನು ಒಳಗೊಂಡಿದೆ. ಭಾಗ-೩ ಆರ್ಥಿಕ ಸಹಾಯ ಮಾಡುವುದರ ಮೂಲಕ ಜಾಹೀರಾತು ನೀಡಿ ತಮ್ಮ ಪರಿಚಯದೊಂದಿಗೆ ಪುಸ್ತಕ ಪರಿಚಲನೆಗೆ ಕಾರಣರಾದ ಮಹನೀಯರು ನೀಡಿದ ಜಾಹೀರಾತುಗಳಿಗೆ ಮೀಸಲಾಗಿದೆ. ಸಂಶೋಧನೆಗಳ ದಾಖಲೀಕರಣ ಹಾಗೂ ವಿಭಾಗದ ಸಾಧನೆಯ ಪ್ರತಿನಿಧೀಕರಣವಾಗಿ ಈ ಕೃತಿ ಮೂಡಿ ಬಂದಿದೆ. ಇದು ೨೦೦೬ರಲ್ಲಿ ಪ್ರಕಟಗೊಂಡಿದೆ.

**೧೦. ದಶಕದ ಕನ್ನಡ ಸಾಹಿತ್ಯ :** ಇದು ಪುಸ್ತಕ ಮಾಹಿತಿ ವಿಶೇಷ ಸಂಪುಟ. ಕನ್ನಡ ವಿಶ್ವವಿದ್ಯಾಲಯಕ್ಕೆ ಹತ್ತು ವರ್ಷಗಳು ತುಂಬಿದ ಶುಭ ಸಂದರ್ಭದಲ್ಲಿ ಈ ಸಂಪುಟವನ್ನು ಸಂಪಾದನೆ ಮಾಡಿಕೊಡಲಾಗಿದೆ. ಇಲ್ಲಿ ೧೯೯೧ರಿಂದ ೨೦೦೦ರವರೆಗೆ ಕನ್ನಡದಲ್ಲಿ ರಚನೆಯಾದ ಕಾವ್ಯ, ಸಣ್ಣಕತೆ, ಕಾದಂಬರಿ, ಆತ್ಮಕಥೆ, ಜೀವನಚರಿತ್ರೆ, ಲಲಿತ ಪ್ರಬಂಧ, ಸಾಹಿತ್ಯ ವಿಮರ್ಶೆ, ಮಕ್ಕಳಸಾಹಿತ್ಯ ಪ್ರವಾಸಸಾಹಿತ್ಯ, ಅಂಕಣಸಾಹಿತ್ಯ, ಗ್ರಂಥಸಂಪಾದನೆ, ಸಂಶೋಧನೆ, ಅನುವಾದ, ಜಾನಪದ, ಭಾಷೆಕೋಶ ಛಂದಸ್ಸು, ನಾಟಕ, ಅಭಿನಂದನ ಗ್ರಂಥಗಳು, ವಿಚಾರ ಸಾಹಿತ್ಯ, ಸಂಸ್ಕೃತಿ ಚಿಂತನೆ, ಮಾನವಿಕ, ವಿಜ್ಞಾನಸಾಹಿತ್ಯ, ಲಲಿತ ಕಲೆಗಳು ಎಂಬ ೨೨ ಪ್ರಕಾರಗಳಿಗೆ ಸಂಬಂಧಿಸಿದ ಗ್ರಂಥಗಳನ್ನು ಸಮೀಕ್ಷೆ ಮಾಡಲಾಗಿದೆ. ಕನ್ನಡ ಸಾಹಿತ್ಯಾಭ್ಯಾಸಿಗಳಿಗೆ ಈ ಸಂಪುಟ ಒಂದು ಪರಾಮರ್ಶನ ಕೃತಿಯಾಗಿದೆ. ೨೦೦೨ರಲ್ಲಿ ಪ್ರಕಟಗೊಂಡಿದೆ.

**೧೧. ಅಧ್ಯಯನದ ವಿಧಿವಿಧಾನಗಳು :** ಡಾ.ಶಂಬಾಜೋಶಿ ಅಧ್ಯಯನ ಪೀಠದ ಸಂಚಾಲಕನಾಗಿ ೨೦೦೬-೦೭ನೇ ಸಾಲಿನಲ್ಲಿ ಕಾರ್ಯನಿರ್ವಹಿಸಿದ್ದೆನು. ಈ ಪೀಠದ ವತಿಯಿಂದ ೨ ದಿನಗಳ ಕಾಲ ನಡೆಸಿದ ಅಧ್ಯಯನದ ವಿಧಿ-ವಿಧಾನಗಳು ಎಂಬ ವಿಚಾರ ಸಂಕಿರಣದಲ್ಲಿ ನಾಡಿನ ಬೇರೆ ಬೇರೆ ವಿದ್ವಾಂಸರು ಭಾಷೆ, ಸಂಸ್ಕೃತಿ, ಸಮಾಜ, ಬುಡಕಟ್ಟು, ಮಹಿಳೆ, ಇತ್ಯಾದಿ ಕ್ಷೇತ್ರಗಳಲ್ಲಿ ಸಂಶೋಧನೆಯ ವೈಧಾನಿಕತೆಯನ್ನು ಕುರಿತು ಚರ್ಚಿಸಿದ್ದಾರೆ. ಜೊತೆಗೆ ಡಾ.ಶಂಬಾ, ಡಾ.ಕಪಟರಾಳ, ಡಾ.ಗೋವಿಂದ ಪೈ, ಡಾ.ಎಂ.ಎನ್.ಶ್ರೀನಿವಾಸ ಅವರುಗಳ ಸಂಶೋಧನ ಶಿಸ್ತುಗಳನ್ನು ಚರ್ಚಿಸಿದ ಪ್ರಬಂಧಗಳು ಇಲ್ಲಿವೆ. ಒಟ್ಟಿನಲ್ಲಿ ಭಾಷೆ, ಸಾಹಿತ್ಯ, ಅಭಿವೃದ್ಧಿ, ಸಮುದಾಯ, ಸಮಾಜಶಾಸ್ತ್ರ ಅಧ್ಯಯನಗಳ ವಿಧಾನವನ್ನು ಕಟ್ಟಿಕೊಡುವ ಲೇಖನಗಳ ಸಂಪಾದಿತ ಕೃತಿಯಿದಾಗಿದೆ. ಇದು ೨೦೦೮ರಲ್ಲಿ ಪ್ರಕಟಗೊಂಡಿದೆ.

**ವೈಯಕ್ತಿಕ ಪ್ರಕಟಿತ ಕೃತಿಗಳು**

**೧. ಮಾನ್ಯ :** ೧೯೯೭ರಲ್ಲಿ ಪ್ರಕಟವಾದ ಮಾನ್ಯ ಚೊಚ್ಚಲ ಕೃತಿ. ಲೇಖಕರು ಬೇರೆ ಬೇರೆ ಸಂದರ್ಭಗಳಲ್ಲಿ ಬರೆದು ವಿಚಾರಸಂಕಿರಣಗಳಲ್ಲಿ ಮಂಡಿಸಿದ ೧೫ ಸಂಲೇಖನಗಳ ಸಂಕಲನ. ಪ್ರಾಚೀನದಿಂದ ಆರ್ವಾಚೀನದವರೆಗೆ ಹರಡಿಕೊಂಡ ಇಲ್ಲಿನ ಚಿಂತನೆಗಳಲ್ಲಿ ಕ್ಷೇತ್ರಕಾರ್ಯದ ಮೂಲಕ ವಿಷಯ ವೈವಿದ್ಯತೆ ಧಾರಾಳವಾಗಿದೆ. ಪ್ರಾಚೀನ ಸಾಹಿತ್ಯದಲ್ಲಿ ನಿರೂಪಿತಗೊಂಡ ಬಾಹುಬಲಿ ಅಕ್ಕಮಹಾದೇವಿ, ಸಾಕ್ಷರತೆ, ಚಾಮರಸ ಎಂಬ ವಿಷಯಗಳನ್ನೊಳಗೊಂಡಂತೆ ಆರಂಭವಾದ ಸಮೀಕ್ಷೆ ಬಳ್ಳಾರಿಜಿಲ್ಲೆಯ ಸ್ವಾತಂತ್ರ ಹೋರಾಟಗಾರರವರೆಗೂ ಮುಂದುವರಿದಿದೆ. ಕನ್ನಡ ಸಾಹಿತ್ಯ ಪರಂಪರೆಗೆ ಅಪಾರ ಸೇವೆ ಸಲ್ಲಿಸಿದ ವೀರಶೈವ ಮತ್ತು ಜೈನಧರ್ಮದ ಬಗ್ಗೆ ಲೇಖಕರಿಗಿರುವ ಅಪಾರ ಕಾಳಜಿಯನ್ನು ಇಲ್ಲಿನ ಲೇಖನಗಳು ವ್ಯಕ್ತಪಡಿಸುತ್ತವೆ. ಜನಪದ ಹಾಗೂ ವಚನ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಜೀವನ ಸಂಗೀತ, ವಚನ ತತ್ವಾನುಭವ ಲೇಖನಗಳು ಮತ್ತು ವೃತ್ತಿಪರ ಜನಾಂಗದವರ ಹಿನ್ನೆಲೆಯಲ್ಲಿ ಸಾಲಿಪದದ ವಿವೇಚನೆಗೂ ಇಲ್ಲಿ ಇಂಬು ದೊರೆತಿದೆ. ಒಟ್ಟಿನಲ್ಲಿ ಕರ್ನಾಟಕ ಸಂಸ್ಕೃತಿಯ ಬಹು ಮುಖ್ಯ ಸಂಗತಿಗಳನ್ನು ಇಲ್ಲಿಯ ಲೇಖನಗಳು ಪ್ರತಿನಿಧಿಸುತ್ತವೆ. ಮಂಗಳಾ ಪ್ರಕಾಶನದಿಂದ ಈ ಕೃತಿ ಪ್ರಕಟವಾಗಿದೆ.

**೨. ಅಗ್ನಿದಿವ್ಯ :** ವಿವಿಧ ವಿಚಾರಗೋಷ್ಠಿಗಳಲ್ಲಿ ಮಂಡಿಸಿದ ೧೫ ಸಂಶೋಧನ ಲೇಖನಗಳ ಸಂಕಲನ. ಪ್ರಸ್ತುತ ಕೃತಿಯಲ್ಲಿ ಬಳ್ಳಾರಿ ಜಿಲ್ಲೆಯ ಜೈನಕೇಂದ್ರಗಳು, ಹಸ್ತಪ್ರತಿ ಸಂಪತ್ತು, ಹಗರಿಬೊಮ್ಮನಹಳ್ಳಿ ತಾಲೂಕಿನ ಸ್ಥಳನಾಮಗಳು, ಹಂಪಿಯ ವೀರಶೈವ ಮಠಗಳು ಮತ್ತು ಕನ್ನಡ ಸಾಹಿತ್ಯ, ಕಂಪ್ಲಿ ಮತ್ತು ಸಾಹಿತ್ಯ, ಕೊಪ್ಪಳದ ಎರಡು ಅಪ್ರಕಟಿತ ತಾಮ್ರಶಾಸನಗಳು ಎಂಬ ಲೇಖನಗಳು ಪ್ರಾದೇಶಿಕತೆಯನ್ನು ದಾಖಲಿಸಿದರೆ, ಗುಂಡಬ್ರಹ್ಮಯ್ಯಗಳ ದಾಖಲೆ, ಉದ್ದರಣೆಗಳು, ವಚನಕಾರರ ವಚನೇತರ ಸಾಹಿತ್ಯ ಮತ್ತು ಬುಕ್ಕರಾಯನ ಚರಿತ್ರೆ ಎಂಬ ಹಂಡೆ ಪಾಳೆಗಾರರ ವಂಶಾವಳಿ ಲೇಖನಗಳು ಉಪೇಕ್ಷಿತ ಸಂಗತಿಗಳನ್ನು ಹಾಗೂ ಅವರ ಸಾಂಸ್ಕೃತಿಕ ಬದುಕನ್ನು ಅನಾವರಣಗೊಳಿಸುತ್ತವೆ. ಅದೇರೀತಿ ಕರ್ನಾಟಕದ ಸಂಸ್ಕೃತಿಯನ್ನು ಎತ್ತಿಹಿಡಿಯುವಲ್ಲಿ ಶ್ರಮಿಸಿದ ಗುರುವರ್ಗ ಪೀಠ ಮಠಗಳ ಮತ್ತು ಪಂಡಿತರ ಸಾಧನೆಗಳನ್ನು ನಾಡಿನಾದ್ಯಂತ ದೊರತ ಹಸ್ತಪ್ರತಿ ಭಂಡಾರಗಳನ್ನು,

ಜನಪದವನ್ನು ಆಶ್ರಯಿಸಿದ ಕೆಲವು ಲೇಖನಗಳನ್ನು ಇಲ್ಲಿ ವಿಶ್ಲೇಷಣೆಗೆ ಒಳಪಡಿಸಿರುವುದು ಲೇಖಕರ ಬಹುಶಿಸ್ತೀಯ ಅಧ್ಯಯನಕ್ಕೆ ಉದಾಹರಣೆ. ಇದು ೨೦೦೩ರಲ್ಲಿ ಗುಲಬರ್ಗಾದ ಅಮರ ಪ್ರಕಾಶನದಿಂದ ಪ್ರಕಟಗೊಂಡಿದೆ.

**೩. ವೀರಶೈವ :** ಹೊಸಪೇಟೆ ತಾಲೂಕು ವೀರಶೈವ ನೌಕರರ ಸಂಘದ ವತಿಯಿಂದ ಸಂಘದ ವರ್ಷಾಚರಣೆಯ ಸಂದರ್ಭದಲ್ಲಿ ೨೦೦೦ರಲ್ಲಿ ಸಂಪಾದನೆಗೊಂಡಿದೆ. ವೀರಶೈವ ಲೇಖಕ ವಿದ್ವಾಂಸರಲ್ಲದೆ, ಬೇರೆ ಸಮುದಾಯದವರು ಸಾಹಿತ್ಯ ಇತಿಹಾಸ, ಚರಿತ್ರೆ ಸಂಸ್ಕೃತಿ, ಕವಿ ಕೃತಿಗಳ ಲೇಖನಗಳನ್ನು ಬರೆದಿದ್ದಾರೆ. ಅವೆಲ್ಲವುಗಳನ್ನು ಸಂಪಾದನೆಗೊಳಿಸಲಾಗಿದೆ.

**೪. ಸಿರಿಸಂಪದ :** ಕರ್ನಾಟಕ ವಿಶ್ವವಿದ್ಯಾಲಯದ ವಿಶ್ರಾಂತ ಪ್ರಾಧ್ಯಾಪಕರು, ಸಂಶೋಧಕರು ಆದ ಡಾ.ಬಿ.ವ್ಹಿ.ಶಿರೂರ ಅವರ ಅಭಿನಂದನ ಗ್ರಂಥ ಇದಾಗಿದೆ. ಯಲಬುರ್ಗಾದ ಬಿ.ವ್ಹಿ.ಶಿರೂರ ಅಭಿನಂದನ ಸಮಿತಿ ೨೦೦೨ರಲ್ಲಿ ಪ್ರಕಟಿಸಿದೆ. ಪ್ರಸ್ತುತ ಸಂಪುಟದಲ್ಲಿ ಮೂರು ಭಾಗಗಳಿವೆ. ಭಾಗ-೧ರಲ್ಲಿ ಕನ್ನಡ ಗ್ರಂಥಸಂಪಾದನೆಗೆ ವಿದ್ವಾಂಸರ ಸಾಧನೆಯನ್ನು ಗುರುತಿಸಲಾಗಿದೆ. ೬೦ ಜನ ಗ್ರಂಥ ಸಂಪಾದಕರು ಇಲ್ಲಿ ತಮ್ಮ ಕಾರ್ಯಗಳ ಮೂಲಕ ಪರಿಚಯಿತರಾಗಿದ್ದಾರೆ. ಭಾಗ-೨ರಲ್ಲಿ ಡಾ.ಶಿರೂರ ಅವರ ವ್ಯಕ್ತಿತ್ವವನ್ನು ಅನಾವರಣಗೊಳಿಸುವ ಸ್ನೇಹಿತರ, ಸಹದ್ಯೋಗಿಗಳ, ಲೇಖನಗಳು ಸಂಯೋಜನೆಗೊಂಡಿವೆ. ಭಾಗ-೩ರಲ್ಲಿ ಡಾ.ಬಿ.ವ್ಹಿ.ಶಿರೂರ ಅವರ ಸಾಹಿತ್ಯವನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಕೌಟುಂಬಿಕ ಹಾಗೂ ವೃತ್ತಿಜೀವನಗಳಲ್ಲಿ ಹಲವಾರು ಘಟನೆಗಳನ್ನು ಲೆಕ್ಕಿಸದೆ ಸದಾ ಓದು ಬೋಧನೆ ಸಂಶೋಧನೆಗೆ ತಮ್ಮನ್ನು ತೊಡಗಿಸಿಕೊಂಡ ಆದರ್ಶ ಪ್ರಾಧ್ಯಾಪಕನ ಜೀವನ ಶೈಲಿಗೆ ಈ ಕೃತಿ ನಿದರ್ಶನ.

**೫. ಲಕ್ಕಣ ದಂಡೇಶನ ಶಿವತತ್ತ್ವ ಚಿಂತಾಮಣಿ ವಿವೇಚನೆ :** ಇದು ಸೊಂಡೂರಿನ ಪ್ರಭುದೇವರ ಜನಕಲ್ಯಾಣ ಸಂಸ್ಥೆಯಿಂದ ೨೦೦೫ರಲ್ಲಿ ಪ್ರಕಟವಾಗಿದೆ. ಜನಕಲ್ಯಾಣ ಸಂಸ್ಥೆಯ ನಿರ್ದೇಶಕನಾಗಿ ಕಾರ್ಯ ನಿರ್ವಹಿಸುವ ಸಂದರ್ಭದಲ್ಲಿ ಶಿವತತ್ತ್ವ ಚಿಂತಾಮಣಿಯನ್ನು ಕುರಿತು ಒಂದು ವಿಚಾರ ಸಂಕಿರಣ ಹಮ್ಮಿಕೊಳ್ಳಲಾಯಿತು. ಆ ನಿಮಿತ್ತ ಕವಿಕಾವ್ಯ ಪರಂಪರೆ, ಪ್ರೇರಣೆ ಪ್ರಭಾವ, ಭಾಷಿಕ, ಧಾರ್ಮಿಕ, ಚಾರಿತ್ರಿಕ, ಹಾಗೂ ಸಾಂಸ್ಕೃತಿಕ ನೆಲೆಗಳಲ್ಲಿ ಶಿವತತ್ತ್ವ ಚಿಂತಾಮಣಿ ಕೃತಿಯನ್ನು ವಿದ್ವಾಂಸರು ವಿಶ್ಲೇಷಿಸಿರುವ ಲೇಖನಗಳು ಇಲ್ಲಿ ಸಂಪಾದನೆಗೊಂಡಿವೆ.

**೬. ಬಳ್ಳಾರಿ ಜಿಲ್ಲಾ ದರ್ಶನ :** ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ೨೫ ವರ್ಷ ತುಂಬಿದ ರಜತ ಮಹೋತ್ಸವ ಸಂಪುಟವಾಗಿ ೨೦೦೫ರಲ್ಲಿ ಸಂಪಾದನೆಗೊಂಡ ಕೃತಿ. ಈ ಸಂಪುಟ ಬಳ್ಳಾರಿ ಜಿಲ್ಲೆಯ ಸಾಹಿತ್ಯಿಕ, ಶೈಕ್ಷಣಿಕ, ಆರ್ಥಿಕ ಹಾಗೂ ಪ್ರಾಕೃತಿಕ ಸಂಪತ್ತನ್ನು ಪರಿಚಯಿಸುತ್ತದೆ. ಬಿಸಿಲುನಾಡಿನ ಲೇಖಕರು, ಪತ್ರಿಕೋದ್ಯಮಿಗಳು, ಪುಸ್ತಕೋದ್ಯಮಿಗಳು, ರಂಗಕರ್ಮಿಗಳು, ಕೃಷಿಕರು, ಶಿಕ್ಷಣ ಸಂಸ್ಥೆಗಳು, ಕಲಾವಿದರು ಮುಂತಾದವರ ಸಾಧನೆಗಳನ್ನು ವಿಶೇಷವಾಗಿ ಜಿಲ್ಲೆಯ ರಾಜಕೀಯ ಏಳುಬೀಳುಗಳನ್ನು ಅಂಕಿ ಅಂಶಗಳಿಂದ ಚರ್ಚಿಸಿರುವ ವಿಶಿಷ್ಟ ಕೃತಿ ಇದಾಗಿದೆ.

**೭. ಹಡಪದ ಅಪ್ಪಣ :** ಬೆಂಗಳೂರಿನ ಬಸವ ಸಮಿತಿಯವರು ಶರಣ ಪರಂಪರೆ ಪುಸ್ತಕ ಮಾಲೆ ಶೀರ್ಷಿಕೆಯಡಿಯಲ್ಲಿ ಪ್ರಕಟಿಸಿದ ೫೪ ಪುಟಗಳ ಕಿರುಹೊತ್ತಿಗೆ ಹಡಪದ ಅಪ್ಪಣ್ಣ. ಶರಣ ಸಮೂಹದಲ್ಲಿ ತುಂಬಾ ಮಹತ್ವದ ಅಷ್ಟೇ ಜವಾಬ್ದಾರಿ ಕಾರ್ಯಗಳನ್ನು ಪೂರೈಸಿದ ಅಪ್ಪಣ್ಣ ಬಸವಣ್ಣನವರ ಸಮಕಾಲೀನ, ಆತನ ಜೀವನ, ಸಾಹಿತ್ಯ ಮಂತ್ರಗೋಪ್ಯ ಮತ್ತು ಸ್ವರವಚನಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಇಲ್ಲಿ ವಿವರಿಸಲಾಗಿದೆ. ೨೦೦೨ರಲ್ಲಿ ಕೃತಿ ಪ್ರಕಟಗೊಂಡಿದೆ.

**೮. ಬಿ.ಎಂ.ಹೊರಕೇರಿ ಸಮಗ್ರ ಸಾಹಿತ್ಯ :** ಬಾಗಲಕೋಟೆ ಜಿಲ್ಲೆಯ ಗುಳೇದಗುಡ್ಡದ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾಗಿದ್ದ ಶ್ರೀ ಬಸಪ್ಪ ಹೊರಕೇರಿ ಅವರು ಕೃಷಿತಜ್ಞರಾಗಿ, ಗಾಂಧೀವಾದಿಗಳಾಗಿ, ಸರ್ವಜ್ಞ ವಚನಗಳ ಪ್ರಸಾರಕರಾಗಿ, ಜಾನಪದ ವಿದ್ವಾಂಸರಾಗಿ ಹೆಸರು ಮಾಡಿದವರು. ಇವರು ಬರೆದ ಹೆಣ್ಣು ಅಬಲೆಯಲ್ಲ ಸಬಲೆ, ಗರತಿ ಗಂಗವ್ವನ ಉಡಿಯಾಗ, ಸಂಯೋಜಕ ಸರ್ವಜ್ಞ, ಕಲ್ಪಜ್ಞನ ವಚನಗಳು ಹೆಸರಿನ ನಾಲ್ಕು ಕೃತಿಗಳನ್ನು ಸಂಪಾದಿಸಿದ ಸಂಪುಟ ಇದಾಗಿದೆ. ಈ ಕೃತಿಯು ಜನಪದರ ಕಾವ್ಯ ಶೈಲಿ, ಭಾಷೆ, ಸಂಸ್ಕೃತಿ, ಸ್ತ್ರೀವಾದಿ ಅಧ್ಯಯನದ ಹಲವು ಆಯಾಮಗಳು, ಸರ್ವಜ್ಞನ ಲೋಕ ದೃಷ್ಟಿಯನ್ನು ಅಂತರಶಿಸ್ತೀಯ ಅಧ್ಯಯನದ ಹಿನ್ನೆಲೆಯಲ್ಲಿ ಚರ್ಚಿಸುವ ಆಕರವಾಗಿದೆ. ಡಾಣಕ ಶಿರೂರಿನ ರವಿಕೀರ್ತಿ ಪ್ರಕಾಶನದ ವತಿಯಿಂದ ೨೦೦೬ರಲ್ಲಿ ಈ ಕೃತಿ ಸಂಪಾದನೆಗೊಂಡಿದೆ.

**೯. ಕರ್ನಾಟಕದ ಮಠಗಳು ಮತ್ತು ಕನ್ನಡ ಸಾಹಿತ್ಯ :** ಇದು ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ೧೯೯೫ರಲ್ಲಿ ಸಾದರಪಡಿಸಿದ ಪಿಎಚ್.ಡಿ, ಮಹಾಪ್ರಬಂಧ. ಸೊಂಡೂರಿನ ಪ್ರಭುದೇವರ ಜನಕಲ್ಯಾಣ ಸಂಸ್ಥೆಯು ೨೦೦೭ರಂದು ಪ್ರಕಟಿಸಿದೆ. ಕನ್ನಡ ಸಾಹಿತ್ಯ ಸೃಷ್ಟಿ, ಸಂರಕ್ಷಣೆ, ಸಂಪಾದನೆ ಹಾಗೂ ಪರಿಚಲನೆಯ ಹಿನ್ನೆಲೆಯಲ್ಲಿ ಕರ್ನಾಟಕದ ಮಠಗಳು ತೊಡಗಿಸಿಕೊಂಡಿದ್ದನ್ನು ಐತಿಹಾಸಿಕವಾಗಿ ಇಲ್ಲಿ ಅಧ್ಯಯನ ಮಾಡಲಾಗಿದೆ. ಮಠಮಾನ್ಯಗಳ ಅರ್ಥ, ಲಕ್ಷಣ, ಸ್ವರೂಪ, ಕರ್ತವ್ಯಗಳನ್ನು ಪರಿಚಯಿಸಿರುವ ಈ ಕೃತಿ ಜೈನ, ಲಿಂಗಾಯತ, ವೈದಿಕ ಹಾಗೂ ಕ್ರೈಸ್ತ ಮಠಗಳ ಸಾಹಿತ್ಯಿಕ ಸಾಧನೆಯನ್ನು ಸಾದಾರಪೂರ್ವಕವಾಗಿ ಚರ್ಚಿಸಲಾಗಿದೆ. ಕನ್ನಡ ಸಾಹಿತ್ಯ ನಿರ್ಮಾಣಕ್ಕೆ ಬಹತೇಕ ಕರ್ನಾಟಕದ ಮಠಗಳೇ ಜನ್ಮಭೂಮಿ ಎಂಬುದನ್ನು ಈ ಕೃತಿ ಸಂಶೋಧನಾತ್ಮಕವಾಗಿ ದಾಖಲಿಸಿದೆ.

**೧೦. ಕುರೇಕುಪ್ಪೆ ಶ್ರೀ ಸಿದ್ಧಯ್ಯ ತಾತನವರು :** ಸೊಂಡೂರು ತಾಲೂಕು ಕುರೇಕುಪ್ಪೆಯ ಸಿದ್ಧಯ್ಯ ತಾತನವರ ಜೀವನ ಚರಿತ್ರೆ ಇದಾಗಿದೆ. ಸಾಮಾಜಿಕ, ಧಾರ್ಮಿಕ, ಸಾಹಿತ್ಯಿಕ ಕ್ಷೇತ್ರದಲ್ಲಿ ದುಡಿದ ಸಿದ್ಧಯ್ಯ ತಾತನವರು ಒಬ್ಬ ಆದರ್ಶ ಶಿಕ್ಷಕರಾಗಿದ್ದರು. ಅವರ ಬದುಕಿನ ಸಾಧನೆಯನ್ನು ವಿವರಿಸುವುದರ ಮೂಲಕ ಗ್ರಾಮಾಂತರ ಪರಿಸರದ ಜನರಲ್ಲಿ ಕುರೇಕುಪ್ಪೆ ಶ್ರೀ ಸಿದ್ಧಯ್ಯ ತಾತನವರು ಬಿತ್ತಿದ ಸಾಂಸ್ಕೃತಿಕ ಕಾಳಜಿಯನ್ನು ವಸ್ತುನಿಷ್ಠವಾಗಿ ಈ ಕೃತಿಯಲ್ಲಿ ವಿವರಿಸಲಾಗಿದೆ. ೨೦೦೬ರಂದು ಶ್ರೀ ರೇಣುಕಾಚಾರ್ಯ ಪ್ರಕಾಶನ ಕುರೇಕುಪ್ಪೆಯಿಂದ ಈ ಕೃತಿ ಪ್ರಕಟಗೊಂಡಿದೆ.

**೧೧. ನುಂಕೆಮಲೆ ಸಿದ್ದೇಶ್ವರ ಪುರಾಣ :** ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ ಬೆಂಗಳೂರು ಇವರು ೨೦೦೭ರಂದು ಈ ಕೃತಿಯನ್ನು ಪ್ರಕಟಿಸಿದೆ. ಚಿತ್ರದುರ್ಗ ಜಿಲ್ಲೆ ಮೊಳಕಾಲ್ಮೂರು ತಾಲೂಕು ನುಂಕೆಮಲೆಯ ಸಿದ್ದೇಶ್ವರ ನಾಥ ಸಂಪ್ರದಾಯದ ಸಾಂಸ್ಕೃತಿಕ ಕೇಂದ್ರ. ಇದರ ಸ್ಥಳಮಹಾತ್ಮೆಯನ್ನು ವಿವರಿಸುವ ಯಕ್ಷಗಾನದ ಹಸ್ತಪ್ರತಿಗಳನ್ನು ಪರಿಷ್ಕರಿಸಿ ಸಂಪಾದಿಸಿಕೊಡಲಾಗಿದೆ. ರಾಗ ತಾಳ, ಭಾಷೆ ಸಂಸ್ಕೃತಿ, ಆಚರಣೆ ನಂಬಿಕೆ, ಸಂಪ್ರದಾಯಗಳನ್ನು ಗರ್ಭೀಕರಿಸಿಕೊಂಡಿರುವ ಈ ಕೃತಿ ೮ ಸಂಧಿಗಳನ್ನು ಒಳಗೊಂಡಿದೆ. ಯರಮಲೆ, ದ್ರೋಣಾದ್ರಿಮಲೆ, ನುಂಕೆಮಲೆ, ನೆಲಮಲೆಗಳಂಥ ಪ್ರಾದೇಶಿಕ ಬೆಟ್ಟಗಳ ಸಂಪ್ರದಾಯವನ್ನು ವಿವರಿಸುವುದರ ಜೊತೆಗೆ ಲಿಂಗಾಯತ ದೈವವಾದ ಭೈರವ ಸಿದ್ದೇಶ್ವರ, ನಾಥ ಪಂಥೀಯರದೈವ ಕಾಲಭೈರವ ಹಾಗೂ ತುಪ್ಪಾಂಬೆ, ಹರಳಯ್ಯರಂಥ ಇತರೆ ಪಂಥೀಯರ ದೈವಗಳಿಂದ ಕೂಡಿದ ನುಂಕೆಮಲೆ ವಿಶಿಷ್ಟ ಆಚರಣೆಯ ಸ್ಥಳಮಹಾತ್ಮೆ ಎಂಬುದು ಈ ಕೃತಿಯ ವಿಶೇಷ.

**೧೨. ವಚನಕಾರರ ವಚನೇತರ ಸಾಹಿತ್ಯ :** ಮೈಸೂರಿನ ಅಖಿಲ ಕರ್ನಾಟಕ ವಚನಸಾಹಿತ್ಯ ಪರಿಷತ್ತು ೨೦೦೯ರಲ್ಲಿ ಪ್ರಕಟಿಸಿದೆ. ೧೨ನೇ ಶತಮಾನದ ವಚನಕಾರರ ಬರವಣಿಗೆಯನ್ನು ರೂಪದ ದೃಷ್ಟಿಯಿಂದ ವಚನಸಾಹಿತ್ಯ, ಸ್ವರವಚನ ಸಾಹಿತ್ಯ ಮತ್ತು ಇತರೆ ಸಾಹಿತ್ಯವೆಂದು ವರ್ಗೀಕರಿಸಬಹುದು. ಈ ಕೃತಿ ವಚನಕಾರರ ಇತರೆ ಸಾಹಿತ್ಯ ಪ್ರಕಾರಗಳಾದ ಮಂತ್ರಗೋಪ್ಯ, ಕರಣಹಸುಗೆ, ಮಿಶ್ರಾರ್ಪಣ, ಸಕೀಲಸಾಹಿತ್ಯ, ಸೃಷ್ಟಿಯವಚನ, ಕಾಲಜ್ಞಾನ ಸಾಹಿತ್ಯ, ದೀಕ್ಷಾವಿಧಾನ, ತ್ರಿವಿಧಿ ಸಾಹಿತ್ಯ, ಕೊರವಂಜಿ ಸಾಹಿತ್ಯ ಮುಂತಾದ ಸಾಹಿತ್ಯವನ್ನು ಇಲ್ಲಿ ವಿಶ್ಲೇಷಣೆ ಮಾಡಲಾಗಿದೆ.

**೧೩. ಚರಿತ್ರೆ-ಚಾರಿತ್ರ್ಯ :** ಇದು ಸಂಶೋಧನ ಲೇಖನಗಳ ಮೂರನೇ ಸಂಪುಟ. ಇಲ್ಲಿ ೪೩ ಲೇಖಗಳು ಸಂಯೋಜನೆಗೊಂಡಿವೆ. ೧. ಆಕರ ಚರಿತ್ರೆ ಚಾರಿತ್ರ್ಯ ಎಂಬ ಭಾಗವು ಅಪ್ರಕಟಿತ ಕೃತಿಗಳ ಪರಿಚವಾಗಿದೆ. ೨.ಹಸ್ತಪ್ರತಿ ಚರಿತ್ರೆ ಚಾರಿತ್ರ್ಯ ಎಂಬ ಭಾಗವು ಹಸ್ತಪ್ರತಿ ಕುರಿತು ಅಧ್ಯಯನಗಳಾಗಿವೆ. ೩.ವಿಜಯನಗರ ಚರಿತ್ರೆ ಚಾರಿತ್ರ್ಯ ಎಂಬ ಭಾಗವು ವಿಜಯನಗರದ ಶಾಸನ, ಶಿಲ್ಪ, ಸ್ಥಳ ಮಹಾತ್ಮೆ, ದಾಖಲೆಗಳ ಅಧ್ಯಯನವಾಗಿದೆ. ೪. ಲಿಂಗಾಯತ ಚರಿತ್ರೆ ಚಾರಿತ್ರ ಎಂಬ ಭಾಗವು ಲಿಂಗಾಯತ ಮಠ, ಸಮುದಾಯ, ಪ್ರಸಾದ ನಿಲಯ, ವ್ಯಕ್ತಿ ಸಾಧನೆಯ ಅಧ್ಯಯನವಾಗಿದೆ. ಅನೇಕ ಹೊಸ ಆಕರಗಳ ಮೂಲಕ ಕರ್ನಾಟಕದ ಇತಿಹಾಸವನ್ನು ಪುನರ್ರಚಿಸುವ ಒತ್ತಾಸೆ ಈ ಕೃತಿಯದಾಗಿದೆ. ಬದುಕಿನ ರೀತಿವಿಶೇಷ ಚರಿತ್ರೆ, ಅದರ ಗುಣವಿಶೇಷ ಚಾರಿತ್ರ್ಯ ಇಂಥ ರೀತಿ ಗುಣಗಳ ಸಾಂಸ್ಕೃತಿಕ ಅಧ್ಯಯನಕ್ಕೆ ಈ ಕೃತಿಯ ಲೇಖನಗಳು ಇಂಬು ನೀಡಿವೆ. ಈ ಗ್ರಂಥವನ್ನು ೨೦೦೮ರಲ್ಲಿ ಅನ್ನಪೂರ್ಣ ಪ್ರಕಾಶನ ಸಿರಿಗೇರಿ ಪ್ರಕಟಿಸಿದೆ.

**೧೪. ಎರಡು ರೂಪಕಗಳು :** ವಿದ್ವಾನ್ ಎಂ.ಗುರುಸಿದ್ಧಯ್ಯನವರು ಒಬ್ಬ ಪ್ರಾಥಮಿಕ ಶಾಲಾ ಶಿಕ್ಷಕ. ಇವರು ಬರೆದ ಲಕ್ಷ್ಮೀಶನ ಜೈಮಿನಿ ಭಾರತದ ಜ್ವಾಲೆ ಪ್ರಸಂಗ ಹಾಗೂ ಹರಿಹರನ ಮಲುಹಣನ ರಗಳೆ ಪ್ರಸಂಗಗಳನ್ನು ಮಲುಹಣೆ ಹಾಗೂ ಜ್ವಾಲೆ ಎಂಬ ಎರಡು ರೂಪಕಗಳನ್ನು ಬರೆದಿದ್ದಾರೆ. ಅವುಗಳ ಸಂಪಾದಿಕ ಕೃತಿ ಇದಾಗಿದೆ. ಜನ ಜನಿತವಾದ ಕೃತಿಗಳನ್ನು ಸಮಕಾಲೀನ ಸ್ವಾತಂತ್ರ ಚಳುವಳಿ ಹಾಗೂ ಕರ್ನಾಟಕ ಏಕೀಕರಣ ಸಂದರ್ಭದಲ್ಲಿ ಚರ್ಚಿಸಿರುವುದು ಈ ರೂಪಕಗಳ ಸಮಕಾಲೀನ ಪ್ರಜ್ಞೆಗೆ ನಿದರ್ಶನವಾಗಿದೆ. ಗುರುಸಿದ್ಧಯ್ಯನವರು ಈ ರೂಪಕಗಳಲ್ಲಿ ಸ್ತ್ರೀವಾದಿ ಅಧ್ಯಯನಕ್ಕೆ ೧೯೪೭ರಲ್ಲಿಯೇ ನಾಂದಿ ಹಾಡಿದ್ದಾರೆಂಬುದನ್ನು ಈ ಕೃತಿಗಳ ಸಂಪಾದನೆಯ ಮೂಲಕ ನಿರೂಪಿಸಲಾಗಿದೆ. ೨೦೦೯ರಲ್ಲಿ ಹೊಸಪೇಟೆಯ ಸಾಯಿಮಣಿ ಪ್ರಕಾಶನ ಈ ಕೃತಿಯನ್ನು ಪ್ರಕಟಿಸಿದೆ.

**೧೫. ಸೇವಾಕಾಂಕ್ಷಿ :** ಹೊಸಪೇಟೆ ಗಾಂಧೀವಾದಿ, ಆದರ್ಶ ಶಿಕ್ಷಕ ಪಂಡಿತ ಕೆ.ನಾರಾಯಣ ಭಟ್ಟ ಅವರ ಅಭಿನಂದನ ಗ್ರಂಥ. ಇದರ ಸಂಪಾದಕನಾಗಿ ನಾರಾಯಣ ಭಟ್ಟರ ಸಾಹಿತ್ಯ, ಸಮಾಜ ಸೇವೆಯನ್ನು ದಾಖಲಿಸಲಾಗಿದೆ. ಈ ಕೃತಿಯ ಮೂಲಕ ಗಾಂಧೀಜಿ, ವಿನೋಬಾಭಾವೆ ಹಾಗೂ ಜೆ.ಪಿ.ಚಿಂತನೆಗಳನ್ನು ಪ್ರಸ್ತುತ ದಿನಮಾನಗಳಲ್ಲಿ ಪ್ರಚಾರಿಸುವುದರ ಕಡೆಗೆ ಸಂಪಾದಿತ ಕೃತಿ ತನ್ನ ಸೊಲ್ಲನ್ನು ಎತ್ತಿದೆ.

**೧೪. ಪ್ರಕಟಿತ ಪ್ರಮುಖ ೧೦ ಲೇಖನಗಳು**

**೧. ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಬಾಹುಬಲಿ** : ಗಂಗರಾಜರ ಮಂತ್ರಿ ಚಾವುಂಡರಾಯ ಶ್ರವಣಬೆಳ್ಗೊಳದಲ್ಲಿ ಸ್ಥಾಪಿಸಿದ ಗೊಮ್ಮಟೇಶ್ವರನನ್ನು ಕುರಿತು ಕವಿ, ಶಾಸನ, ಜನಪದ ಸಾಹಿತ್ಯಗಳಲ್ಲಿ ಸುತ್ತಿಸಲ್ಪಟ್ಟಿದೆ. ಬಾಹುಬಲಿಯನ್ನು ಕುರಿತು ಒಂದೊಂದು ಕಾವ್ಯಗಳು ಸನ್ನಿವೇಶವನ್ನೇ ಮೀಸಲಿರಿಸಿವೆ. ಅವೆಲ್ಲವುಗಳನ್ನು ಈ ಲೇಖನದಲ್ಲಿ ಚರ್ಚಿಸಲಾಗಿದೆ. ಪಂಪ, ರತ್ನಾಕರವರ್ಣಿ, ಕೆಲವು

ಶಾಸನಗಳು ಹಾಗೂ ಜನಪದರು ಚಿತ್ರಿಸಿದ ಬಾಹುಬಲಿಯನ್ನು ವೈರಾಗ್ಯ ಪ್ರತಿನಿಧಿ, ಸಾತ್ವಿಕ ಗುಣವಂತ, ನಿರ್ವಾಣಪ್ರಭು, ಯೋಗಸಾಧಕನಂತೆ ಚಿತ್ರಿತವಾದ ಈತನ ವ್ಯಕ್ತಿತ್ವವನ್ನು ಕನ್ನಡ ಸಾಹಿತ್ಯ ಪರಿಭಾವಿಸಿದ್ದನ್ನು ಈ ಲೇಖನ ಒಳಗೊಂಡಿದೆ.

**೨. ಪ್ರಾಚೀನ ಕಾಲದಲ್ಲಿ ಸಾಕ್ಷರತೆ ಮತ್ತು ಸೇವೆ :** ಯಾವುದೇ ದೇಶದ ವೈಚಾರಿಕ ಬದುಕಿಗೆ ಜನ ಸಾಕ್ಷರರಾಗಬೇಕು ಜೊತೆಗೆ ಸೇವಾ ಪ್ರವೃತ್ತಿ ರೂಢಿಸಿಕೊಂಡಿರಬೇಕೆಂಬುದು ತುಂಬಾ ಮುಖ್ಯ. ಪ್ರಾಚೀನ ಕನ್ನಡಿಗರಿಗೆ ಸಾಕ್ಷರತೆ ಹಾಗೂ ಸೇವೆ ಎರಡು ಬದುಕಿನ ಆದರ್ಶಗಳು ಇವುಗಳನ್ನು ಸಮಾಜದಲ್ಲಿ ಅನುಷ್ಠಾನಕ್ಕೆ ತರಲು ನಿರಂತರ ಪ್ರಯತ್ನಿಸಿದ್ದಾರೆ. ವಿದ್ಯೆಯಿಂದ ವಂಚಿತನಾದವನು ಪಶುವಿಗೆ ಸಮಾನ. ವಿದ್ಯೆಯಿಂದ ವಿನಯ, ವಿನಯದಿಂದ ಪಾತ್ರತೆ, ಪಾತ್ರತೆಯಿಂದ ಸಂಪತ್ತು, ಸಂಪತ್ತಿನಿಂದ ಧರ್ಮ, ಧರ್ಮದಿಂದ ಸುಖ ಪ್ರಾಪ್ತವಾಗುತ್ತರೆಂಬುದು ನಮ್ಮವರ ನಂಬಿಕೆ. ಹಾಗೆಯೇ ಕೆರೆಯನ್ನು ಕಟ್ಟಿಸುವುದು, ಬಾವಿಯನ್ನು ತೋಡಿಸುವುದು, ದೇವಾಲಯವನ್ನು ನಿರ್ಮಿಸುವುದು, ಇವು ಪ್ರಾಚೀನರ ಸೇವಾ ದ್ಯೋತಕಗಳು ಈ ಎಲ್ಲ ಉಪಕ್ರಮವನ್ನು ಪ್ರಸ್ತುತ ಲೇಖನದಲ್ಲಿ ವಿವರಿಸಲಾಗಿದೆ.

**೩. ಬಳ್ಳಾರಿ ಜಿಲ್ಲೆಯ ಪ್ರಾಚೀನ ಜೈನಕೇಂದ್ರಗಳು** : ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಪರಂಪರೆ ಚರಿತ್ರಾರ್ಹವಾದದ್ದು. ಇದು ವೀರಶೈವ, ವೈದಿಕ ಕೇಂದ್ರವಾದಂತೆ ಜೈನ ಕೇಂದ್ರವೂ ಆಗಿದೆ. ತೊಲಗದೆ ಜೈನ ಮಾರ್ಗದೊಳೆ ನಿಚ್ಚಳರಿಪ್ಪುದು ಎಂದು ೧೦೫೪ರ ಕೋಗಳಿ ಶಾಸನ ಕರೆಕೊಡುವುದನ್ನು ನೋಡಿದರೆ ಜಿಲ್ಲೆಯ ಜೈನರು ೧೧ನೇ ಶತಮಾನದಷ್ಟೊತ್ತಿಗೆ ಅನ್ಯ ಧರ್ಮಕ್ಕೆ ಮತಾಂತರಗೊಳ್ಳ ಹತ್ತಿದಂತಿದೆ. ಅದೇನೇ ಇದ್ದರೂ ಜಿಲ್ಲೆಯ ಜೈನಾವಶೇಷಗಳ ಶೋಧನೆಯೊಂದಿಗೆ ದೇವಾಲಯದ ವಾಸ್ತು, ಶಾಸನ ಉಲ್ಲೇಖಗಳಿಂದ ಅಲಬೂರು, ಕುಡುತಿನಿ, ಕೋಗಳಿ, ಮೋರಗೇರಿ, ಹಂಪಿ, ಕುರುಗೋಡು ಇನ್ನೂ ಹತ್ತಾರು ಊರುಗಳು ಜೈನ ಕೇಂದ್ರಗಳಾಗಿರುವುದನ್ನು ಅಧ್ಯಯನ ಮಾಡಲಾಗಿದೆ.

**೪. ಕೊಪ್ಪಳದ ಎರಡು ಅಪ್ರಕಟಿತ ತಾಮ್ರಶಾಸನಗಳು** : ಒಂದು ನಾಡಿನ ಚರಿತ್ರೆಯ ನಿರ್ಮಾಣಕ್ಕೆ ಸ್ಥಿರ ದಾಖಲೆಗಳೆನಿಸುವ ಶಾಸನಗಳು ಮುಖ್ಯ. ಈ ಹಿನ್ನೆಲೆಯಲ್ಲಿ ಪಡುನಾಡೊಳಗಣ, ಹಸ್ತಿನಾವತಿವಳಿತಾದ ಕಾತರಿಕೆ ವೇಂಟಕ್ಕೆ ಸೇರುವ ಕಸಬೆ ಕೊಪ್ಪಳದ ಗೌಡಕಿ ಹಾಗೂ ಶಾನಭೋಗಿಕಿಯನ್ನು ಬಿಟ್ಟುಕೊಡುವ ಎರಡು ತಾಮ್ರಶಾಸನಗಳ ಪ್ರಸ್ತಾಪ ಇಲ್ಲಿದೆ. ಕೊಪ್ಪಳ ನಾಡಿನ ಬರಗಾಲ, ಸಾಲ ಸಂಬಂಧಗಳ ಹೆಚ್ಚಳ ಇನ್ನೂ ಹಲವಾರು ಪಾಕೃತಿಕ, ಕೌಟುಂಬಿಕ ಸಮಸ್ಯೆಗಳನ್ನು ವಿವರಿಸುವ ಶಾಸನಗಳು ಪ್ರಾಚೀನ ಕಾಲದ ಹಿಟ್ಟು, ಹುಗಿನಿಧಿ, ನಿಕ್ಷೇಪ, ಜಲ, ಪಾಶಾಣ, ಅಕ್ಷಣೆ, ಆಗಮಿ, ಸಿದ್ಧ, ಸಾಧ್ಯಗಳೆಂಬ ಅಷ್ಟಬೋಗಗಳನ್ನು ದೇಸಾಯಿ, ನಾಡದೇಸಾಯಿ, ಪಟ್ಟಣಶೆಟ್ಟಿ, ತಳವಾರ, ಮಾದಿಗ, ಅಕ್ಕಸಾಲೆ, ಕಮ್ಮಾರ ಇತ್ಯಾದಿ ಆಯಗಾರರನ್ನು ಸಾಕ್ಷಿಗಾರರನ್ನಾಗಿ ಮಾಡಿಕೊಂಡು ಬರೆಸಿದ ಬರೆದುಕೊಟ್ಟ ಒಪ್ಪಂದ ಪತ್ರಗಳೆಂಬುದನ್ನು ಈ ಲೇಖನದಲ್ಲಿ ನಿರೂಪಿಸಲಾಗಿದೆ.

**೫. ಬುಕ್ಕರಾಯನ ಚರಿತ್ರೆಯೆಂಬ ಹಂಡೆ ಪಾಳೇಗಾರರ ವಂಶಾವಳಿ** : ಕ್ರಿ.ಶ.೧೮೧೧ರಲ್ಲಿ ರಚನೆಯಾದ ಬುಕ್ಕರಾಯನ ಚರಿತ್ರೆಯೆಂಬ ಮೈಸೂರು ವಿಶ್ವವಿದ್ಯಾಲಯದ ಭಂಡಾರದಲ್ಲಿರುವ ಹಸ್ತಪ್ರತಿ. ಇದು ಬಳ್ಳಾರಿ ಭಾಗವನ್ನು ಆಳಿದ ಹಂಡೆಪಾಳೆಗಾರರನ್ನು ಅವರ ವಂಶಾವಳಿಯನ್ನು ನಿರೂಪಿಸುವ ಕೃತಿ. ಹಂಡೆಯ ಬಲದ ಹನುಮಪ್ಪ ನಾಯಕ ಈ ವಂಶಾವಳಿಯ ಮೂಲ ಪುರುಷ. ಬಾದುಷಾಹನಿಂದ ವಜೀರ ಬಿರುದನ್ನು ಪಡೆದ ಇವರಲ್ಲಿ ಶಿವಭಕ್ತರಿದ್ದರು. ಇವರ ಕುಲದೈವ ಬಿಜಾಪುರ ಸೀಮೆಯ ಸೊನ್ನಲಾಪುರದ ಸಿದ್ಧರಾಮೇಶ್ವರ, ಹತ್ತಾರು ಸಾಮಾಜಿಕ ಕಾರ್ಯಗಳನ್ನು ಮಾಡಿದ ಹಂಡೆ ಪಾಳೆಗಾರರ ಆಚಾರ ವಿಚಾರ ಹಾಗೂ ಕೊನೆಯ ದಿನಗಳನ್ನು ಕಟ್ಟಿಕೊಡುವ ವಂಶಾವಳಿ ಐತಿಹಾಸಿಕ ದಾಖಲೆಯೆಂಬುದಾಗಿ ಪ್ರಸ್ತುತ ಲೇಖನದಲ್ಲಿ ವಿವರಿಸಲಾಗಿದೆ.

**೬. ಪಂಚಮ ಶಿವಭಕ್ತರ ಕುಲಾಗಮ** : ಇತ್ತೀಚಿನ ಅಧ್ಯಯನಗಳು ಸಮಾಜಶಾಸ್ತ್ರದ ಕಡೆಗೆ ಮುಖ ಮಾಡಿವೆ. ಇದರಿಂದ ಮಾನವನ ಆದಿಮ ಸಂಸ್ಕೃತಿಯ ಹಲವು ಮಜಲುಗಳು ತೆರೆದುಕೊಳ್ಳುತ್ತವೆ. ತನ್ನ ಉಪಜೀವನಕ್ಕಾಗಿ ವೃತ್ತಿ ಅವಲಂಬಿಸಿದ ಮಾನವನಿಗೆ ಅದು ಜಾತಿ ವಾಚಕವಾಗಿ ಪ್ರತ್ಯೇಕ ಸಮುದಾಯದ ಅಸ್ತಿತ್ವಕ್ಕೆ ಕಾರಣವಾಯಿತು. ಅಂಥ ಪಂಚಮಸಾಲಿ ಕುಲಾಗಮನವನ್ನು ನಿರೂಪಿಸುವ ಅಪ್ರಕಟಿತ ಹಸ್ತಪ್ರತಿಯೊಂದು ಕನ್ನಡ ವಿಶ್ವವಿದ್ಯಾಲಯದ ಭಂಡಾರದಲ್ಲಿರುವುದನ್ನು ಎತ್ತಿಕೊಂಡು ಕರ್ನಾಟಕದ ಕೃಷಿ ಅವಲಂಬಿತ ವಣಿಕ ಸಂಘದ ಚಟುವಟಿಕೆಗಳನ್ನು ಇಲ್ಲಿ ದಾಖಲಿಸಲಾಗಿದೆ. ವಿದ್ವಾಂಸರ ಗಮನಕ್ಕಾಗಿ ಪೂರ್ಣ ಪ್ರತಿಯನ್ನು ಸಂಪಾದಿಸಿಕೊಡಲಾಗಿದೆ.

**೭. ಗಜಶಾಸ್ತ್ರ ಸಾಹಿತ್ಯ :** ಭಾರತೀಯರಿಗೆ ವೇದ ಕಾಲದಿಂದಲೂ ಆನೆಗಳ ಪರಿಚಯವಿದೆ. ಮಾನವನ ಸಂಗಾತಿಗಳಾಗಿ ಜೀವಿಸುತ್ತಿದ್ದ ಆನೆಗಳ ಲಕ್ಷಣ, ಪ್ರಕಾರ, ರೋಗಲಕ್ಷಣ, ಉಪಚಾರ, ಉಪಯೋಗ ಕುರಿತು ಗಜಶಾಸ್ತ್ರ ಸಾಹಿತ್ಯ ಕನ್ನಡದಲ್ಲಿ ರಚನೆಯಾಗಿದೆ. ಅವುಗಳಲ್ಲಿ ಗಂಗರರಾಜ ಶಿವಮಾರನ ಗಜಾಷ್ಟಕ, ವೀರಭದ್ರರಾಜನ ಹಸ್ತಾಯುರ್ವೇದ ಟೀಕೆ, ಸೋದೆ ಸದಾಶಿವನ ಗಜಾಶ್ವ ಲಕ್ಷಣ, ಗುರುನಂದೀಶ್ವರ ಬರೆದ ಗಜಲಕ್ಷಣಗಳು ಪ್ರಮುಖವೆನಿಸಿವೆ. ಇವುಗಳ ಜೊತೆಗೆ ಲೋಕೋಪಕಾರ, ಮಾನಸೋಲ್ಲಾಸ, ಸೌಗಂಧಿಕ ಪರಿಣಯ, ಶಿವತತ್ತ್ವ ರತ್ನಾಕರದಂಥ ಕೃತಿಗಳು ಗಜಶಾಸ್ತ್ರವನ್ನು ನಿರೂಪಿಸುತ್ತವೆ. ಅವೆಲ್ಲವುಗಳನ್ನು ಬಳಸಿಕೊಂಡು ಪ್ರಾಚೀನರು ಆನೆಯ ಸಾಕಾಣಿಕೆ, ಅವುಗಳ ಆರೈಕೆ, ಉಪಯೋಗವನ್ನು ಪಡೆದುಕೊಂಡ ರೀತಿಯನ್ನು ಇಲ್ಲಿ ಪರಿಚಯಿಸುವ ಕೆಲಸ ಮಾಡಲಾಗಿದೆ.

**೮. ಹಸ್ತಪ್ರತಿ ಸಾಂಸ್ಕೃತಿಕ ಅಧ್ಯಯನ :** ಕನ್ನಡ ಹಸ್ತಪ್ರತಿಗಳ ವಸ್ತು ವೈವಿಧ್ಯತೆ ಅವುಗಳ ಸಾಂಸ್ಕೃತಿಕ ಅಧ್ಯಯನಕ್ಕೆ ಅನುವು ಮಾಡಿಕೊಡುತ್ತದೆ. ವಿಶೇಷವಾಗಿ ಹಸ್ತಪ್ರತಿ ಅಧ್ಯಯನ ಏಕ ಮುಖವಾದುದಲ್ಲ. ಬಹುಶಿಸ್ತೀಯ ನೆಲೆಯಲ್ಲಿ ನಡೆಯುವಂಥದ್ದು. ಸ್ಥಳೀಯ ಚರಿತ್ರೆಗೆ ಆಕರವಾಗಬಲ್ಲ ಇವುಗಳಲ್ಲಿ ಜಾತಿ, ಪ್ರಾದೇಶಿಕ ವೈಶಿಷ್ಟ್ಯ, ಜಾನಪದ ತಿಥಿಮತಿಗಳಾದ ವಾರ, ನಕ್ಷತ್ರ, ಪಕ್ಷ, ಮಾಸ, ಗಳಿಗೆಗಳಂಥ ಸಮಯಗಳು ಯಂತ್ರ ಮಂತ್ರ, ಪ್ರಶ್ನಾಶಾಸ್ತ್ರ, ಸಾಮುದ್ರಿಕ ವಿಷಯಗಳು, ಅಡ್ಡಹೆಸರುಗಳು, ಬಿಳಿಎಳ್ಳು, ಕಾಡರಿಶಿಣ, ಅವಿಜ, ನುಗ್ಗಿ ಬೀಜಗಳಂಥ ಜಾನಪದ ಧಾನ್ಯಗಳು ಮುಂತಾದವುಗಳನ್ನು ವಿಶ್ಲೇಸುವುದರ ಮೂಲಕ ಹಸ್ತಪ್ರತಿಗಳಿಗಿರುವ ಸಾಂಸ್ಕೃತಿಕ ಮುಖವನ್ನು ಪರಿಚಯಿಸಲಾಗಿದೆ.

**೯. ವಿಜಯನಗರ – ಟೀಕಾಸಾಹಿತ್ಯ :** ಹಂಪಿ ವಾಸ್ತುಶಿಲ್ಪದಲ್ಲಿ ವಿಜಯನಗರ ಶೈಲಿಯನ್ನು, ಸಾಹಿತ್ಯದಲ್ಲಿ ರಗಳೆ, ಷಟ್ಪದಿ ಪ್ರಕಾರಗಳನ್ನು ಹಾಕಿಕೊಟ್ಟ ಬೆನ್ನಲ್ಲಿಯೇ ಟೀಕಾ ಸಾಹಿತ್ಯವನ್ನು ಬೆಳೆಸಿದ ಸಾಮ್ರಾಜ್ಯವೂ ಆಗಿದೆ. ಒಂದು ಕೃತಿಗೆ ಅರ್ಥ ಭಾವ ಉದ್ದೇಶಗಳನ್ನು ವಿವರಿಸುವ ಸಾಹಿತ್ಯ ಪ್ರಕಾರಕ್ಕೆ ಟೀಕು ಎನ್ನುತ್ತೇವೆ. ವಿಜಯನಗರದಲ್ಲಿ ಮಹಾಲಿಂಗದೇವ, ಜಕ್ಕಣಾರ್ಯ, ಶ್ರೀಗಿರೀಂದ್ರ, ಕಲ್ಲುಮಠದ ಪ್ರಭುದೇವ, ಗುಬ್ಬಿಮಲ್ಲಣಾರ್ಯ, ಮಗ್ಗೆಯ ಮಾಯಿದೇವ ಇವರುಗಳು ಟೀಕಾಸಾಹಿತ್ಯವನ್ನು ರಚಿಸಿ, ಬೆಳೆಸಿದವರು, ವಿಶೇಷವಾಗಿ ಶರಣರ ವಚನಗಳಿಗೆ ನೂರೊಂದು ಸ್ಥಲಕಟ್ಟುಗಳ ಆಧಾರದ ಹಿನ್ನೆಲೆಯಲ್ಲಿ ಹಾಡು ಸ್ವರವಚನಗಳ ಮೂಲಕ ಟೀಕಾಸಾಹಿತ್ಯವನ್ನು ರಚಿಸಿರುವುದನ್ನು ಈ ಲೇಖನ ವಿವರಿಸುತ್ತದೆ.

**೧೦. ಹರ್ಡೇಕರ ಮಂಜಪ್ಪನವರ ಸ್ಮರಣೆ ಸ್ಮಾರಕಗಳು :** ರಾಷ್ಟ್ರಧರ್ಮ ದ್ರಷ್ಟಾರ, ಕರ್ನಾಟಕ ಗಾಂಧಿ ಹರ್ಡೇಕರ ಮಂಜಪ್ಪನವರು ೧೯೪೭ ಜನವರಿ ೩ರಂದು ಲಿಂಗೈಕ್ಯರಾದರು. ಅವರು ಲಿಂಗೈಕ್ಯರಾಗಿ ೬೧ ವರ್ಷಗಳ ಅವಧಿಯಲ್ಲಿ ಕರ್ನಾಟಕದಲ್ಲಿ ಅವರನ್ನು ಸ್ಮರಿಸುವ ಕೆಲಸಗಳು, ಸ್ಮಾರಕಗಳು ಏನೇನಾಗಿವೆ ಎಂಬುದನ್ನು ಈ ಲೇಖನ ವಿವರಿಸುತ್ತದೆ. ಅವುಗಳಲ್ಲಿ ಹರ್ಡೇಕರರನ್ನು ಕುರಿತು ಬಂದ ಪುಸ್ತಕ ಲೇಖನಗಳ ಸ್ಮರಣೆ, ಸಂಘ ಸಂಸ್ಥೆಗಳ ಸ್ಥಾಪನಾಸ್ಮರಣೆ, ವ್ಯಕ್ತಿ ಅಭಿಪ್ರಾಯಗಳ ಸ್ಮರಣೆ, ಪ್ರಶಸ್ತಿ ಪುರಸ್ಕಾರಗಳ ಸ್ಮರಣೆಯನ್ನು ಇಲ್ಲಿ ದಾಖಲಿಸಲಾಗಿದೆ. ಒಟ್ಟಿನಲ್ಲಿ ಸಮಾಜ, ರಾಷ್ಟ್ರ ಚಿಂತಕರ ಬಗ್ಗೆ ನಾಡು ಸ್ಮರಿಸಿಕೊಂಡ ಅನನ್ಯತೆಯನ್ನು ಇಲ್ಲಿ ಕ್ರೂಢೀಕರಿಸಿಕೊಡಲಾಗಿದೆ.

**೧೩. ಪಿಎಚ್.ಡಿ ಮಾರ್ಗದರ್ಶನ**

| ಅಭ್ಯರ್ಥಿಗಳು | ಶೀರ್ಷಿಕೆ | ಪದವಿಘೋಷಿಸಿದ ದಿನಾಂಕ |
|---|---|---|
| **೧. ಡಾ.ಶಕುಂತಲಾಗೋಪಶೆಟ್ಟಿ** | **ರೇವಣಸಿದ್ಧ : ಒಂದು ಅಧ್ಯಯನ** | **೧೧.೯.೨೦೦೩** |

ಈ ಮಹಾಪ್ರಬಂಧವು ರೇವಣಸಿದ್ದನನ್ನು ಕುರಿತು ರಚನೆಯಾದ ಹರಿಹರನ ರೇವಣಸಿದ್ಧೇಶ್ವರ ರಗಳೆ, ಚನ್ನಬಸವನ ರೇವಣಸಾಂಗತ್ಯ, ಚತುರ್ಮುಖ ಬೊಮ್ಮರಸನ ರೇವಣಸಿದ್ಧೇಶ್ವರ ಪುರಾಣ, ಜಾಲವಾದಿ ಮಲ್ಲಣನ ರೇವಣಸಿದ್ಧೇಶ್ವರ ಕಾವ್ಯ, ಚನ್ನಬಸವಶಾಸ್ತ್ರಿಗಳ ಹಾಲುಮತ ಪುರಾಣ, ನಂಜನಗೂಡು ಶ್ರೀಕಂಠಶಾಸ್ತ್ರಿಗಳ ರೇಣುಕ ವಿಜಯ ಪುರಾಣ ಕೃತಿಗಳನ್ನು ಅಧ್ಯಯನಕ್ಕೆ ಒಳಪಡಿಸಿದೆ. ಜೊತೆಗೆ ಕನ್ನಡ ಕಾವ್ಯಗಳಲ್ಲಿ ಪ್ರಾಸಂಗಿಕವಾಗಿ ಉಲ್ಲೇಖಿತಾದ ರೇವಣಸಿದ್ಧೇಶ್ವರನ ಸಂಗತಿಗಳನ್ನು ಪೂರಕವಾಗಿ ಬಳಸಿಕೊಳ್ಳಲಾಗಿದೆ. ಕಾವ್ಯ ಭಾಷೆ, ಸನ್ನಿವೇಶ, ರೇವಣಸಿದ್ಧನ ಹುಟ್ಟು, ಬಾಲ್ಯ, ವಿವಾಹಗಳಲ್ಲದೆ ಆ ಕಾಲದ ಧಾರ್ಮಿಕ, ಸಾಮಾಜಿಕ ಸ್ಥಿತ್ಯಂತರಗಳನ್ನು ಅಂಥ ಸಾಂಸ್ಕೃತಿಕ ಸಂದರ್ಭದಲ್ಲಿ ರೇವಣಸಿದ್ಧನಿಗೆ ಇರುವ ವ್ಯಾಪಕ ಜನಪ್ರಿಯತೆಯನ್ನು ಪುನಾರಚಿಸಿರುವುದು ಈ ಮಹಾಪ್ರಬಂಧದ ಕೊಡುಗೆಯೆನಿಸಿದೆ. ಈ ಪ್ರಬಂಧ ಅಪೂರ್ವ ಪ್ರಕಾಶನ ರಾಯಚೂರು ಅವರಿಂದ ೨೦೦೬ರಲ್ಲಿ ಪ್ರಕಟಗೊಂಡಿದೆ.

| | | |
|---|---|---|
| **೨. ಡಾ.ಎ.ಕರಿಬಸಪ್ಪ** | **ಬಳ್ಳಾರಿ ಜಿಲ್ಲೆಯ ಐತಿಹ್ಯಗಳು** | **೧೧.೯.೨೦೦೩** |

ಜಾನಪದ ಅಧ್ಯಯನ ಪ್ರಪಂಚದಲ್ಲಿ ಐತಿಹ್ಯಗಳು ಒಂದು. ಪ್ರತಿಯೊಂದು ಹಳ್ಳಿ ಮತ್ತು ಪರಿಸರಕ್ಕೆ ಸಂಬಂಧಿಸಿದಂತೆ ಐತಿಹ್ಯಗಳು ಹುಟ್ಟಿಕೊಂಡಿರುತ್ತವೆ. ಈ ಹಿನ್ನೆಲೆಯಲ್ಲಿ ಈ ಮಹಾಪ್ರಬಂಧ ಬಳ್ಳಾರಿ ಜಿಲ್ಲೆಯ ಐತಿಹ್ಯಗಳಿಗೆ ಮೀಸಲಾಗಿದೆ. ಐತಿಹ್ಯಗಳ ಅರ್ಥ, ಸ್ವರೂಪ, ಉಗಮ, ಬೆಳವಣಿಗೆ, ಪ್ರಕಾರಗಳಲ್ಲದೆ, ಐತಿಹ್ಯಗಳಿಗೂ ಹಾಗೂ ಇತಿಹಾಸ, ಪುರಾಣ, ದಂತಕಥೆ, ನಂಬಿಕೆ, ಸಂಪ್ರದಾಯಗಳೊಂದಿಗಿನ ಐತಿಹ್ಯಗಳ ಸಂಬಂಧವನ್ನು, ಗಾದೆ, ಒಡಪು, ಒಗಟು, ನುಡಿಗಟ್ಟುಗಳಂಥ ಜಾನಪದ ಪ್ರಕಾರಗಳ ಬಳಕೆಯಲ್ಲಿ ನಿರೂಪಿತಗೊಳ್ಳುವ ಐತಿಹ್ಯಗಳನ್ನು ಜಿಲ್ಲೆಯಲ್ಲಿ ವ್ಯಕ್ತಿ, ಸ್ಥಳ, ದೈವ, ದೆವ್ವ, ಪ್ರಾಕೃತಿಕವಾಗಿ ಬೆಳೆದು ಬಂದಿರುವ ಐತಿಹ್ಯಗಳ ಮೂಲಕ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸವನ್ನು ದಾಖಲಿಸಿರುವುದು ಈ ಅಧ್ಯಯನದ ಹೆಗ್ಗಳಿಕೆಯಾಗಿದೆ. ಹೊಸಪೇಟೆಯ ಸಾಯಿಮಣಿ ಪ್ರಕಾಶನದಿಂದ ೨೦೦೯ರಲ್ಲಿ ಪ್ರಕಟಗೊಂಡಿದೆ.

| | | |
|---|---|---|
| **೩. ಡಾ.ಬಿ.ಮಂಜುಳಾ** | **ಕನ್ನಡದಲ್ಲಿ ಸೂಪಶಾಸ್ತ್ರಸಾಹಿತ್ಯ** | **೧೦.೦೬.೨೦೦೪** |

ಗಜಶಾಸ್ತ್ರ, ಕೃಷಿಶಾಸ್ತ್ರ, ಹಯಶಾಸ್ತ್ರ, ವೈದ್ಯಶಾಸ್ತ್ರಗಳಂಥ ಲೌಕಿಕ ಶಾಸ್ತ್ರ ಸಾಹಿತ್ಯಕ್ಕೆ ಸೇರಿರಿರುವ ಸೂಪಶಾಸ್ತ್ರ ದೇಶಿ ಅಡಿಗೆ ಪದ್ಧತಿ. ಇದನ್ನು ತಿಳಿಸುವ ವೈಧಾನಿಕ ಕೃತಿಗಳು ಕನ್ನಡದಲ್ಲಿ ಬೆಳೆದು ಬಂದಿವೆ. ೩ನೇ ಮಂಗರಸ ಸೂಪಶಾಸ್ತ್ರ ಎಂಬ ಪೂರ್ಣ ಪ್ರಮಾಣದ ಕೃತಿಯನ್ನೆ ಬರೆದಿದ್ದಾನೆ. ಪ್ರಸ್ತುತ ಪ್ರಬಂಧ ಸೂಪ ಪದದ ಅರ್ಥ, ಸ್ವರೂಪ ಕುರಿತು ವಿವರಿಸುತ್ತದೆ. ಆಹಾರ ಪ್ರಕಾರಗಳು, ಮಾಡುವ ವಿಧಾನ ಸೂಪಶಾಲೆಯ ಲಕ್ಷಣ, ಸೂಪ ಪರಿಕರಗಳು, ಸೂದಕನಲಕ್ಷಣ, ಹಾಗೂ ಈ ಶಾಸ್ತ್ರದ

ವೈಶಿಷ್ಟ್ಯಗಳನ್ನು ಸೈದ್ಧಾಂತಿಕವಾಗಿ ವಿವರಿಸುತ್ತದೆ. ನಿರ್ಲಕ್ಷಿತ ಶಾಸ್ತ್ರ ಸಾಹಿತ್ಯವನ್ನು ಕುರಿತು ಅಭ್ಯಾಸ ಮಾಡಿದ ಕನ್ನಡ ಸಂಶೋಧನ ಕ್ಷೇತ್ರದ ವಿನೂತನ ಪ್ರಯತ್ನವೆನಿಸಿದೆ. ಈ ಮಹಾಪ್ರಬಂಧ ಹೊಸಪೇಟೆಯ ಭರಣಿ ಪ್ರಕಾಶನದಿಂದ ೨೦೦೬ರಲ್ಲಿ ಪ್ರಕಟಗೊಂಡಿದೆ.

**೪. ಡಾ.ಎಸ್.ಚಂದ್ರಮೌಳಿ ಡಾ.ಸಿದ್ಧಲಿಂಗ ಪಟ್ಟಣಶೆಟ್ಟಿ ಸಮಗ್ರ ಸಾಹಿತ್ಯ ೧.೬.೨೦೦೯**

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಡಾ.ಸಿದ್ಧಲಿಂಗ ಪಟ್ಟಣಶೆಟ್ಟಿ ಅವರು ಅನುವಾದ, ಅಂಕಣ, ಕಾವ್ಯ, ವಿಮರ್ಶೆ, ಸಂಪಾದನೆ, ಜೀವನ ಚರಿತ್ರೆ, ನಾಟಕ ಪ್ರಕಾರಗಳಲ್ಲಿ ದೊಡ್ಡ ಹೆಸರು ಮಾಡಿದವರು. ಈ ಎಲ್ಲ ಸಾಹಿತ್ಯ ಪ್ರಕಾರಗಳನ್ನು ವಿಶ್ಲೇಷಿಸುವುದರ ಮೂಲಕ ಹೊಸಗನ್ನಡ ಸಾಹಿತ್ಯದಲ್ಲಿ ಡಾ.ಪಟ್ಟಣಶೆಟ್ಟಿಯವರ ಸಾಧನೆಯನ್ನು ಗುರುತಿಸಲಾಗಿದೆ. ವಿಶೇಷವಾಗಿ ಹಿಂದಿ ಪ್ರಾಧ್ಯಾಪಕರಾಗಿದ್ದ ಪಟ್ಟಣಶೆಟ್ಟರು ಕನ್ನಡ ಲೇಖಕರಾಗಿ ಎರಡೂ ಭಾಷೆಗಳ ಸಾಂಸ್ಕೃತಿಕ ವಿನಿಮಯಕ್ಕೆ ನಾಟಕ, ಅಂಕಣ, ಕಾವ್ಯಗಳನ್ನು ದುಡಿಸಿಕೊಂಡ ಬಗೆಯನ್ನು ಪ್ರಸ್ತುತ ಮಹಾಪ್ರಬಂಧ ಸಾದಾರ ಪೂರ್ವಕವಾಗಿ ವಿವೇಚಿಸಿದೆ.

**೫. ಡಾ.ಎಚ್.ಎಸ್.ವಿರೂಪಾಕ್ಷಪ್ಪ ಕನ್ನಡದಲ್ಲಿ ಕೃಷಿಶಾಸ್ತ್ರಸಾಹಿತ್ಯ ೨೦.೧೧.೨೦೦೯**

ಕನ್ನಡದಲ್ಲಿ ಕೃಷಿಜ್ಞಾನ ಪ್ರದೀಪಿಕೆ, ಲೋಕೋಪಕಾರ, ರಟ್ಟಮತಗಳಂಥ ಶಾಸ್ತ್ರ ಸಾಹಿತ್ಯದಲ್ಲಿ ಪ್ರಾಚೀನರ ಕೃಷಿ ಜ್ಞಾನವನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಕೃಷಿ ಉಪಕರಣಗಳ ತಯಾರಿಕೆ, ಸಂರಕ್ಷಣೆ, ಉಪಯೋಗ, ಮುಂಗಾರು ಹಿಂಗಾರು ಬೆಳೆ, ನೀರಿನ ಶೋಧ, ವಡ್ಡುಹಾಕುವ ಪದ್ಧತಿ, ಸಾವಯವ ಗೊಬ್ಬರ ಬಳಕೆ, ತೋಟಗಾರಿಕೆ ಮುಂತಾದ ಸಂಗತಿಗಳನ್ನು ಈ ಪ್ರಬಂಧ ಅನಾವರಣಗೊಳಿಸುತ್ತದೆ. ವಿಶೇಷವಾಗಿ ರೈತಾಪಿ ವರ್ಗದ ವಿಷಯವೊಂದನ್ನು ಕನ್ನಡ ಸಾಹಿತ್ಯ ಕೈಗೆತ್ತಿಕೊಂಡ ಬಗೆ, ಆ ಮೂಲಕ ಕನ್ನಡ ಸಾಹಿತ್ಯದಲ್ಲಿ ಶಾಸ್ತ್ರಸಾಹಿತ್ಯ ಕುರಿತಾದ ಅಧ್ಯಯನ ನೆಡೆಯಬೇಕಾದ ಕಡೆಗೆ ಈ ಮಹಾಪ್ರಬಂಧ ಬೆರಳು ಮಾಡಿ ತೋರಿಸುತ್ತದೆ.

**೬. ಡಾ.ಬಿ.ಹುಲಿಗೆಮ್ಮ ಹಾಲುಮತ ಪುರಾಣಗಳು ಸಾಂಸ್ಕೃತಿಕ ಅಧ್ಯಯನ ೧.೧೨.೨೦೦೯**

ಭಾರತದ ಇತಿಹಾಸದಲ್ಲಿ ಸಾವಿರಾರು ಸಮುದಾಯಗಳು ಅಸ್ತಿತ್ವದಲ್ಲಿವೆ. ಅವುಗಳಲ್ಲಿ ಹಾಲುಮತ ಸಮುದಾಯ ವಿಶಿಷ್ಟವಾಗಿದೆ. ಕನ್ನಡದಲ್ಲಿ ರಚನೆಯಾಗಿರುವ ಸಿದ್ಧಮಂಕಚರಿತೆ, ತಗರಪವಾಡ, ಗೊಲ್ಲಾಳೇಶ್ವರ ಪುರಾಣ, ಮಾಳಿಂಗರಾಯನ ಕಾವ್ಯ ಮುಂತಾದವು ಹಾಲುಮತ ಸಮಾಜದ ಆಚರಣೆ, ನಂಬಿಕೆ, ಹಬ್ಬ ಹರಿದಿನಗಳಲ್ಲದೆ, ರೇವಣಸಿದ್ಧ, ಸಿದ್ಧರಾಮ, ಅಮೋಘಸಿದ್ಧ ಸಂಪ್ರದಾಯಗಳನ್ನು ವಿವರಿಸುತ್ತವೆ. ಕನ್ನಡದಲ್ಲಿ ವೀರಶೈವ, ಜೈನ ಪುರಾಣಗಳ ಪ್ರಮಾಣ ಹಾಗೂ ಪರಿಣಾಮಗಳಷ್ಟೇ ಉಪೇಕ್ಷಿ ಸಮುದಾಯ ಒಂದರ ಪುರಾಣ ಪ್ರಜ್ಞೆಯನ್ನು ಶೈಕ್ಷಣಿಕ ಶಿಸ್ತಿನಲ್ಲಿ ಚರ್ಚಿಸಿರುವುದು ಈ ಮಹಾಪ್ರಬಂಧದ ರಚನಾತ್ಮಕ ಆಲೋಚನೆಯಾಗಿದೆ.

**೭. ಡಾ.ಜೆ.ಕುಮಾರ ನೂರೊಂದು ವಿರಕ್ತರು : ಒಂದು ಅಧ್ಯಯನ ೦೧.೧೨.೨೦೦೯**

ಕರ್ನಾಟಕದಲ್ಲಿ ಹಂಪಿ ಹಲವು ಅಧ್ಯಯನಗಳ ಆಕರ ಕೇಂದ್ರವಾಗಿದೆ. ೧೪ನೇ ಶತಮಾನದ ನೂರೊಂದು ವಿರಕ್ತರನ್ನು ಕುರಿತು ಕನ್ನಡ ಕಾವ್ಯಗಳು ರಚನೆಯಾಗಿವೆ. ಸಾಮಾನ್ಯವಾಗಿ ವಚನಸಾಹಿತ್ಯದ ಅಥವಾ ವೀರಶೈವ ಸಾಹಿತ್ಯದ ಪುನರುತ್ಥಾನದಲ್ಲಿ ಈ ನೂರೊಂದು ವಿರಕ್ತರ ಪಾತ್ರ ಮಹತ್ವವಾದುದೆಂದು ಇದುವರೆಗಿನ ಅಧ್ಯಯನಗಳು ಅಭಿಪ್ರಾಯಪಟ್ಟಿವೆ. ಪ್ರಸ್ತುತ ಅಧ್ಯಯನ ನೂರೊಂದು ವಿರಕ್ತರು ನಾಥಸಂಪ್ರದಾಯಕ್ಕೆ ಸೇರಿದವರು, ವೀರಶೈವ ವಿರಕ್ತರಲ್ಲ ಎಂಬುದನ್ನು ಬಹು ಮೂಲದ ಆಕರಗಳಿಂದ ಸಾಬೀತುಮಾಡಿದೆ. ನೂರೊಂದು ವಿರಕ್ತರನ್ನು ಕುರಿತು ಸಾಹಿತ್ಯ, ನೂರೊಂದು ವಿರಕ್ತರ ಸಾಹಿತ್ಯ, ಅವುಗಳಲ್ಲಿಯ ಸಾಮಾಜಿಕ ಧಾರ್ಮಿಕ ಅಂಶಗಳನ್ನು ವಿವೇಚಿಸಿರುವ ಈ ಪ್ರಬಂಧಕ್ಕೆ ಕರ್ನಾಟಕದ ಧಾರ್ಮಿಕ ಪಂಥ ಒಂದನ್ನು ಅಧ್ಯಯನಕ್ಕೆ ಒಳಪಡಿಸಿದ ಗೌರವ ಸಲ್ಲುತ್ತದೆ.

**೧೬. ಎಂ.ಫಿಲ್ ಮಾರ್ಗದರ್ಶನ**

**ಅಭ್ಯರ್ಥಿಗಳು ಶೀರ್ಷಿಕೆ ಪದವಿಘೋಷಿಸಿದ ದಿನಾಂಕ**

**೧. ಶ್ರೀಮತಿ ಲಲಿತಾಬಾವಿಕಟ್ಟಿ ಇಳಕಲ್ಲ ಸೀರೆ : ಸಾಂಸ್ಕೃತಿಕ ಅಧ್ಯಯನ ೦೩.೦೧.೨೦೦೮**

ಕರ್ನಾಟಕದಲ್ಲಿ ಮಂಗಳೂರು ಹಂಚು, ಮುಧೋಳನಾಯಿ, ಕಿನ್ನಾಳಗೊಂಬೆ, ಗೋಕಾಕಕರಿದೆಂಟು, ಬೆಳಗಾವಿಕುಂದಾಗಳಂಥ ವಿಶಿಷ್ಟ ವಸ್ತುಗಳಿಗೆ ಸಾಂಸ್ಕೃತಿಕ ಹಿನ್ನೆಲೆಯಿದೆ. ಅದೇ ರೀತಿ ಇಳಕಲ್ಲ ಸೀರೆಯೂ ಕೂಡ. ಪ್ರಸ್ತುತ ಕಿರುಪ್ರಬಂಧದಲ್ಲಿ ಇಳಕಲ್ಲ ನೇಕಾರರ ಸ್ಥಿತಿಗತಿ, ವ್ಯಾಪಾರ ವಹಿವಾಟು ಹಾಗೂ ಸೀರೆಕೆಲಸಗಳಲ್ಲಿ ತೊಡಗಿಸಿಕೊಂಡಿರುವ ಕಾರ್ಮಿಕ ವರ್ಗ ಹಾಗೂ ಬಂಡವಾಳ ಹೂಡಿಕೆದಾರರ ಹಬ್ಬ ನಂಬಿಕೆ, ಇಲಿಪೂಜೆ ಆಚರಣೆ, ಇಳಕಲ್ಲ ಸೀರೆಯ ಉಪಯೋಗ, ಗಾದೆ, ಒಗಟು, ಒಡಪು ಕುರಿತು ಸಾಂಸ್ಕೃತಿಕವಾಗಿ ಅಧ್ಯಯನ ಮಾಡಲಾಗಿದೆ.

**೨. ಕು.ಅನುಪಮ ಆದಾಪುರ ಡಿಗ್ಗಿ ಸಂಗಮನಾಥ : ಒಂದು ಅಧ್ಯಯನ ೨೯.೧೨.೨೦೦೯**

ಕರ್ನಾಟಕದಲ್ಲಿ ಸಮಯಕಲ್ಯಾಣ, (ಬಸವಕಲ್ಯಾಣ), ವಿಜಯಕಲ್ಯಾಣ (ಹಂಪಿ), ಅಮರಕಲ್ಯಾಣ (ಶಹಾಪುರ, ಸಗರನಾಡು), ಧರ್ಮಕಲ್ಯಾಣ (ನಾಗಾವಿ) ಹಾಗೂ ಕಡೆಯ ಕಲ್ಯಾಣ (ಕೊಡೇಕಲ್ಲು) ಹೀಗೆ ಕಟ್ಟುತ್ತಾ ಬಂದ ಕಲ್ಯಾಣಗಳಿವು. ಇವು ಶರಣ

ಪರಂಪರೆಯನ್ನು ಮುನ್ನೆಡೆಸಿದ ಸಾಂಸ್ಕೃತಿಕ ಕೇಂದ್ರಗಳು. ಇವುಗಳಲ್ಲಿ ಅಮರಕಲ್ಯಾಣ ಪ್ರದೇಶವಾದ ದಿಗ್ಗಿ ಸಂಗಮನಾಥನ ಅಧ್ಯಯನವನ್ನು ಈ ಕಿರುಪ್ರಬಂಧ ಪ್ರತಿನಿಧಿಸುತ್ತದೆ. ಕಲ್ಯಾಣ ಸಂಸ್ಕೃತಿಯಲ್ಲಿ ಗವಿಗಳಿಗೆ ಮಹತ್ವವಿದೆ. ಈ ಎಲ್ಲ ಕಲ್ಯಾಣಗಳು ಆ ಸಂಸ್ಕೃತಿಯನ್ನು ಉಳಿಸಿಕೊಂಡು ಬಂದಿವೆ. ದಿಗ್ಗಿ ಸಂಗಮನಾಥನ ಜಾತ್ರೆ, ಆಚರಣೆ ಹಾಗೂ ಸಂಗಮನಾಥನ ಜಾಗ್ರತ ಸ್ಥಳಗಳಾದ ಜಲದುರ್ಗ, ಹೆಬ್ಬಾಳ, ಕೊಡೇಕಲ್ಲ ಕುರಿತು ಇಲ್ಲಿ ಅಧ್ಯಯನ ಮಾಡಲಾಗಿದೆ.

**೧೭. ಪಡೆದ ಪ್ರಶಸ್ತಿ – ಮನ್ನಣೆ**

೧. ಕನ್ನಡ ಪುಸ್ತಕ ಪ್ರಾಧಿಕಾರ ಪ್ರಶಸ್ತಿ ೧೯೯೭, ಮಾನ್ಯ ಕೃತಿಗೆ ಪುಸ್ತಕ ಸೊಗಸು ಪುರಸ್ಕಾರ
೨. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ೨೦೦೦, ಕನ್ನಡ ದಾಖಲು ಸಾಹಿತ್ಯ ಸಂಶೋಧನ ಕೃತಿಗೆ ಪುರಸ್ಕಾರ
೩. ಸುತ್ತೂರು ಶ್ರೀಶಿವರಾತ್ರೀಶ್ವರ ಪ್ರಶಸ್ತಿ ೨೦೦೦ ಬಸವಯುಗದ ವಚನೇತರ ಸಾಹಿತ್ಯ ಅತ್ಯುತ್ತಮ ವೀರಶೈವ ಕೃತಿ ಪುರಸ್ಕಾರ

**೧೮. ಶೈಕ್ಷಣಿಕ ಉದ್ದೇಶಕ್ಕಾಗಿ (ವಿಶ್ವವಿದ್ಯಾಲಯ ಹೊರತುಪಡಿಸಿ)**
**ನಿರ್ವಹಿಸಿದ ಯೋಜನೆಗಳು**

**೧. ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಬೆಂಗಳೂರು :** ಪ್ರಾಚೀನ ಕರ್ನಾಟಕದ ಆಕರಗಳಾದ ಶಾಸನ, ಹಸ್ತಪ್ರತಿ, ದಾಖಲೆಗಳು, ಅಪ್ರಕಟಿತ ಕಾವ್ಯಗಳನ್ನು ಸಂಗ್ರಹಿಸುವ ಪ್ರಕಟಿಸುವ ಯೋಜನೆಯನ್ನು ಇಲಾಖೆ ಹಾಕಿಕೊಂಡಿದೆ. ಈ ಹಿನ್ನೆಲೆಯಲ್ಲಿ ನುಂಕಿಮಲೆ ಸಿದ್ದೇಶ್ವರ ಪುರಾಣದ ಹಸ್ತಪ್ರತಿಯನ್ನು ಶೋಧಿಸಿ, ಪರಿಷ್ಕರಿಸಿ ಸಂಪಾದಿಸುವ ಯೋಜನೆಯಲ್ಲಿ ಕಾರ್ಯನಿರ್ವಹಿಸಲಾಗಿದೆ.
ಇದೇ ಇಲಾಖೆಯ ೨ನೇ ಹಂತದ ಪ್ರಕಟಣೆಯಲ್ಲಿ ಸದಸ್ಯನಾಗಿ ನಿಯೋಜಿತಗೊಂಡಿದ್ದು, ೨೫ ಕೃತಿಗಳ ಪ್ರಕಟಣೆಗೆ ಹಸ್ತಪ್ರತಿಗಳ ಆಯ್ಕೆ, ಸಂಪಾದಕ – ವಿದ್ವಾಂಸರ ಆಯ್ಕೆ ಸಮಿತಿಯಲ್ಲಿ ಸಕ್ರಿಯವಾಗಿ ಪಾಲುಗೊಂಡು ಇಲಾಖೆಯ ಶೈಕ್ಷಣಿಕ ಉದ್ದೇಶವನ್ನು ಅನುಷ್ಠಾನಗೊಳಿಸಲಾಗಿದೆ.

**೨. ಪ್ರಭುದೇವರ ಜನಕಲ್ಯಾಣ ಸಂಸ್ಥೆ, ಸೊಂಡೂರು :** ಸೊಂಡೂರಿನ ಪ್ರಭುದೇವರ ಸಂಸ್ಥಾನ ಮಠವು ಸ್ಥಾಪಿಸಿರುವ ಜನಕಲ್ಯಾಣ ಸಂಸ್ಥೆಯ ನಿರ್ದೇಶಕನಾಗಿ ನಿಯೋಜಿತಗೊಂಡಿದ್ದೇನೆ. ಈ ಸಂಸ್ಥೆಯ ವತಿಯಿಂದ ಸಾಹಿತ್ಯ ಸಂಸ್ಕೃತಿ ಚಿಂತನ ಮಾಲೆಯನ್ನು ಅನುಷ್ಠಾನಕ್ಕೆ ತರಲಾಗಿದೆ. ಕಾವ್ಯ, ಭಾಷೆ, ಶಾಸನ, ಹಸ್ತಪ್ರತಿ, ಜಾನಪದ, ಆಚರಣೆ, ನಂಬಿಕೆಗಳಂಥ ವಿಶೇಷ ಆಕರಗಳನ್ನು ಸಂಗ್ರಹಿಸುವುದು, ಕಾರ್ಯಾಗಾರ ಏರ್ಪಡಿಸುವುದು, ಸಮ್ಮೇಳನ ನಡೆಸುವುದು ಹಾಗೂ ಪುಸ್ತಕ ಪ್ರಕಟಿಸುವ ಯೋಜನೆಗಳನ್ನು ಈಗಾಗಲೇ ಕೈಗೆತ್ತಿಕೊಳ್ಳಲಾಗಿದೆ.

**೧೯. ನಿರ್ವಹಿಸಿದ ಇತರೆ ಕೆಲಸಗಳು**

**೧. ಆಡಳಿತಾತ್ಮಕ ಕೆಲಸಗಳು**

ಅಂತಾರಾಷ್ಟ್ರೀಯ ವಚನಅಧ್ಯಯನ ಕೇಂದ್ರ ಕೂಡಲಸಂಗಮದ ಆರಂಭಿಕ ಮುಖ್ಯಸ್ಥನಾಗಿ ಕಾರ್ಯನಿರ್ವಹಿಸಿರುವುದು ೧೨.೦೩.೨೦೦೭ರಿಂದ ೧೬.೦೬.೨೦೦೯

**೨. ಹೆಚ್ಚಿನ ಜವಾಬ್ದಾರಿಗಳು**

೧. ಕನ್ನಡ ವಿವಿ ಪುಸ್ತಕ ಮಾಹಿತಿ ಸಂಪಾದಕ ೧೯೯೮–೨೦೦೩
೨. ಡಾ.ಶಂಬಾಜೋಶಿ ಅಧ್ಯಯನ ಪೀಠದ ಸಂಚಾಲಕ ೨೦೦೫–೨೦೦೭
೩. ಜೈನ ಅಧ್ಯಯನ ಪೀಠದ ಸಂಚಾಲಕ ೨೨.೮.೨೦೦೯ರಿಂದ
೪. ಎಂ.ಎ.,ಪಿಎಚ್.ಡಿ, ಕನ್ನಡ ಸಾಹಿತ್ಯ ಸಂಯೋಜಿತ ಪದವಿ ಸಂಚಾಲಕ ೨೩.೭.೨೦೦೯ರಿಂದ
೫. ಹಸ್ತಪ್ರತಿ ವಿಭಾಗದ ಶೈಕ್ಷಣಿಕ ಯೋಜನೆಗಳ ನಿರ್ವಹಣಾ ಸಂಚಾಲಕ
೬. ಸಮಗ್ರ ಜೈನ ಸಾಹಿತ್ಯ ಸಂಪುಟಗಳ ಪ್ರಕಟಣಾ ಸಮಿತಿ ಸದಸ್ಯ ೨೦೦೯ರಿಂದ
೭. ಕನ್ನಡ ಸಾಹಿತ್ಯ ಪರಿಷತ್ತು, ಹೊಸಪೇಟೆ ತಾಲೂಕು ಅಧ್ಯಕ್ಷ ೨೦೦೧ ರಿಂದ ೨೦೦೭